ಜಾನಪದ ಜಂಗಮ ಎಸ್. ಕೆ. ಕರೀಂಖಾನ್

ವ್ಯಕ್ತಿ ಪರಿಚಯ



ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಜನಪ್ರಿಯ ಜಾನಪದ ಪುಸ್ತಕ ಮಾಲೆ - ೨೨

ಜಾನಪದ ಜಂಗಮ ಎಸ್.ಕೆ. ಕರೀಂಖಾನ್

ವ್ಯಕ್ತಿ ಪರಿಚಯ

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಕರ್ನಾಟಕ ಸರ್ಕಾರಿ ನೌಕರರ ವಸತಿ ಬಡಾವಣೆ,
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು - 560 054

JANAPADA JANGAMA S.K. KAREEM KHAN -
A pen portrait - by Prof. D. LINGAIAH.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ : ೨೦೦೮

ಪ್ರತಿಗಳು : ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)

ಮುದ್ರಕರು : ಕೃತಿಕ ಪ್ರಿಂಟ್–ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು – 560 030
ಮೊಬೈಲ್ – 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಅಥವಾ ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ವಿದ್ವಾಂಸರಾದ **ಪ್ರೊ. ಡಿ. ಲಿಂಗಯ್ಯ** ಅವರು **ಜಾನಪದ ಜಂಗಮ ಎಸ್.ಕೆ. ಕರೀಂಖಾನ್** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೨-೦೬-೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಜಾನಪದ ಜಂಗಮ ಎಸ್.ಕೆ. ಕರೀಂಖಾನ್

ಒಂದು

ಭವ್ಯ ಪರಂಪರೆಯ ಭಾರತ ದೇಶಕ್ಕೆ ಹೊಂದಿಕೊಂಡ ದೇಶ ಆಫ್ಘಾನಿಸ್ತಾನ. ಅದು ಭಾರತದಂತೆ ಬ್ರಿಟಿಷರ ವಶವಾಗಿ ದಾಸ್ಯದಲ್ಲಿತ್ತು. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುತ್ತಿತ್ತು. ಅನೇಕ ಯುವಕರು ಸೈನ್ಯಕ್ಕೆ ಸೇರಿ ಸ್ವಾತಂತ್ರ್ಯ ಗಳಿಕೆಗಾಗಿ ಹೋರಾಡಿದರು. ಅಂಥವರಲ್ಲಿ ಕಾಬೂಲಿನ ಅಬ್ದುಲ್ ರೆಹಮಾನ್ ಖಾನ್ ಒಬ್ಬರು. ಅವರು ತಮ್ಮ ಹದಿನಾರನೆಯ ವಯಸ್ಸಿಗೇ ಸೈನ್ಯಕ್ಕೆ ಸೇರಿ ಮೂರನೆಯ ಆಫ್ಘನ್ ಯುದ್ಧದಲ್ಲಿ ಹೋರಾಡಿದರು. ಯುದ್ಧದಲ್ಲಿ ಗುಂಡಿನೇಟು ತಿಂದರು. ಎರಡು ಗುಂಡುಗಳು ದೇಹವನ್ನು ಪ್ರವೇಶಿಸಿ ಘಾಸಿಗೊಳಿಸಿದವು. ಆ ಯೋಧ ಧೈರ್ಯಗೆಡಲಿಲ್ಲ. ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನಕ್ಕೆ ಸಿದ್ಧವಾಗಿದ್ದ.

ಕ್ರಾಂತಿಕಾರಿ ಅಬ್ದುಲ್ ರೆಹಮಾನ್ ಖಾನ್ ಮತ್ತು ಸಹೋದರರ ನಡುವೆ ಗೃಹಕಲಹ ಸಂಭವಿಸಿತು. ಆಗ ಸ್ವದೇಶವನ್ನು ತ್ಯಜಿಸಿದ ಅಬ್ದುಲ್ ರೆಹಮಾನ್ ಖಾನ್ ಭಾರತಕ್ಕೆ ವಲಸೆ ಬಂದು ಕರ್ನಾಟಕ ರಾಜ್ಯದ ಈಗಿನ ಹಾಸನ ಜಿಲ್ಲೆ ಮಂಜರಾಬಾದ್ (ಮಂಜಪ್ಪ ನಾಯಕನ ಪಾಳ್ಯ) ತಾಲ್ಲೂಕಿನ ಸಕಲೇಶಪುರದಲ್ಲಿ ನೆಲೆನಿಂತರು. ಆಗ ಸಕಲೇಶಪುರ ಪುಟ್ಟ ಊರು. ಇದ್ದುದರಲ್ಲಿ ದೊಡ್ಡದಾದ ಒಂದು ಬೀದಿಯಲ್ಲಿ ಒಂದು ಸಾಲಿನಲ್ಲಿ ಒಕ್ಕಲಿಗರ ಮನೆಗಳು, ಎದುರು ಸಾಲಿನಲ್ಲಿ ಬ್ರಾಹ್ಮಣರ ಮನೆಗಳು. ಒಕ್ಕಲಿಗರ ಒಂದು ಮನೆಯಲ್ಲಿ ಅಬ್ದುಲ್ ರೆಹಮಾನ್ ಖಾನ್ ವಾಸ.

ಮಡಿಕೇರಿ ಜಿಲ್ಲೆಯ ವಿರಾಜ ಪೇಟೆಯ ಗಣ್ಯ ಮುಸಲ್ಮಾನ ವ್ಯಕ್ತಿ ಸೈಯದ್ ಹೈದರ್. ಅವರು ಅರಬ್ ದೇಶದ ಮುಸಲ್ಮಾನರು. ವಲಸೆ ಬಂದು ನೆಲೆಸಿದವರು. ಅವರ ಮಗಳು ಜೈಬುನ್ನೀಸ. ಸಂಬಂಧ ಕುದುರಿ ಆಫ್ಘಾನಿಸ್ತಾನದ ಅಬ್ದುಲ್ ರೆಹಮಾನ್ ಖಾನ್ ಮತ್ತು ಅರಬ್ ಮೂಲದ ಜೈಬುನ್ನೀಸ ಸತಿಪತಿಯರಾದರು.

ಅಬ್ದುಲ್ ರೆಹಮಾನ್ ಖಾನರಿಗೆ ವಂಶಪಾರಂಪರ್ಯವಾಗಿ ಬಂದಿದ್ದ ಯುನಾನಿ ವೈದ್ಯ ಚಿಕಿತ್ಸೆ ಸಿದ್ಧಿಸಿತ್ತು. ಹಲವು ಕಾಯಿಲೆಗಳಿಗೆ ಯುನಾನಿ ಪದ್ಧತಿಯ ಚಿಕಿತ್ಸೆ ನೀಡಿ ಹೆಸರುಗಳಿಸಿದರು. ಸಂಸಾರ ನಿರ್ವಹಣೆಗೆ ವೈದ್ಯ ಚಿಕಿತ್ಸೆಯೇ ಆಧಾರವಾಯಿತು. ಆ ದಂಪತಿಗಳು ಅವಿದ್ಯಾವಂತರು. ಆದರೆ ವ್ಯವಹಾರಸ್ಥರು, ಲೋಕಜ್ಞಾನಿಗಳು. ಅವರಿಗೆ ಎಂಟುಜನ ಗಂಡುಮಕ್ಕಳು, ಒಬ್ಬಳು ಹೆಣ್ಣು ಮಗಳು. ಅವರಲ್ಲಿ ಕರೀಂಖಾನ್ ಆರನೆಯ ಮಗು. ಮನೆಯ ತುಂಬ ಮಕ್ಕಳಾದುದರಿಂದ ಬಡತನ ಕಾಲಿಟ್ಟಿತು.

ಕರೀಂಖಾನ್ ಸುಮಾರು 1910 ರಲ್ಲಿ ಸಕಲೇಶಪುರದಲ್ಲಿ ಜನಿಸಿದರು. ಎಲ್ಲಾ ಸಹೋದರರಂತೆ ತಾಯಿತಂದೆಯರ ಅಕ್ಕರೆಯಲ್ಲಿ ಬೆಳೆದರು. ಅವರ ಬಾಲ್ಯ ಸಾಮಾನ್ಯ ಮಕ್ಕಳಂತೆ ಕಳೆಯಿತು. ತಾಯಿ ತಂದೆಯರಂತೆ ನೆರೆಹೊರೆಯವರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದರು. ಊರಿನಲ್ಲೆಲ್ಲಾ ಅವರದೊಂದೇ ಮುಸಲ್ಮಾನ ಸಂಸಾರ. ಸಮವಯಸ್ಕ ಹಿಂದೂ ಹುಡುಗರೊಡನೆ ಆಟಪಾಟಗಳಲ್ಲಿ ಭಾಗವಹಿಸುವುದು, ಮನೆಯವರ ಕಣ್ಣು ತಪ್ಪಿಸಿ ಹೇಮಾವತಿ ನದಿಯಲ್ಲಿ ಈಜಾಡುವುದು ಅಭ್ಯಾಸವಾಯಿತು. ಉತ್ಸಾಹದಿಂದ ತಂದೆ, ಸಹೋದರರೊಡನೆ ಊರೊಟ್ಟಿನ ಹಬ್ಬ ಜಾತ್ರೆ ಭಜನೆ ಮೊದಲಾದ ಕಾರ್ಯಕ್ರಮಗಳಲ್ಲಿ

ತೊಡಗುವುದು ಹೆಚ್ಚಾಯಿತು. ಅವರಲ್ಲಿ ಒಡಹುಟ್ಟಿದ ಸೋದರರಿಗಿಂತ ಭಿನ್ನವಾದ ಚಟುವಟಿಕೆಗಳು ಕಾಣಿಸಿಕೊಂಡವು.

ದೊಡ್ಡ ಸಂಸಾರದ ನಿರ್ವಹಣೆಗೆ ಯುನಾನಿ ಪಂಡಿತನ ಆದಾಯ ಸಾಲದಾದಾಗ, ಅಬ್ದುಲ್ ರೆಹಮಾನ್ ಖಾನ್ ಜವಳಿ ವ್ಯಾಪಾರಕ್ಕೆ ತೊಡಗಿದರು. ಸಕಲೇಶಪುರದಲ್ಲಿ ಎಸ್.ಕೆ. ಖಾನ್ ಜವಳಿ ಅಂಗಡಿ ತಲೆಯೆತ್ತಿತು. ಜೊತೆಗೆ ಬಟ್ಟೆ ಹೊಲೆಯುವ ವೃತ್ತಿಯೂ ಪ್ರಾರಂಭವಾಯಿತು. ಎಸ್.ಕೆ.ಖಾನ್ ಅಂಡ್ ಬ್ರದರ್ಸ್ ಟೈಲರ್ಸ್ ಫಲಕ ಹುಟ್ಟಿಕೊಂಡಿತು. ತಂದೆಯ ವ್ಯವಹಾರದಲ್ಲಿ ಮಕ್ಕಳೂ ಪಾಲ್ಗೊಂಡರು. ಬಟ್ಟೆ ವ್ಯಾಪಾರ ಹಾಗೂ ಬಟ್ಟೆ ಹೊಲೆಯುವ ಕೆಲಸ ಸಾಕಷ್ಟು ಚೆನ್ನಾಗಿಯೇ ನಡೆಯಿತು. ವ್ಯಾಪಾರದಲ್ಲಿ ಖಾನ್ ಕುಟುಂಬ ಗುರುತಿಸಿಕೊಂಡಿತು. ಊರಿನ ಪ್ರಮುಖರಲ್ಲಿ ಖಾನರೂ ಒಬ್ಬರಾದರು. ಊರಿನ ಕಾರ್ಯಕ್ರಮಗಳಿಗೆ ಖಾನರಿಗೂ ಆಹ್ವಾನ ಬರುತ್ತಿತ್ತು. ಇದರಿಂದ ಹಿಂದೂ ಬಂಧುಗಳೊಡನೆ ಸಹಜವಾಗಿ ಬೆರೆಯುವ ಅವಕಾಶವಾಯಿತು.

ದುಡಿಮೆಯಲ್ಲಿ ಮಕ್ಕಳ ಸಹಾಯ ಬೇಕಾಗಿದ್ದರೂ ಎಲ್ಲರೂ ದುಡಿದರೂ ಸಂಸಾರ ಸಾಗಿಸುವುದು ಕಷ್ಟವಾದರೂ ಸ್ವಲ್ಪವಾದರೂ ಶಿಕ್ಷಣ ಸಿಗಲಿ ಎಂದು ಕರೀಂಖಾನರನ್ನು ಸಕಲೇಶಪುರದ ಪ್ರಾಥಮಿಕ ಉರ್ದುಶಾಲೆಗೆ ಸೇರಿಸಿದರು. ಅಲ್ಲಿ ಅಧ್ಯಾಪಕರು ಬೆತ್ತದಿಂದ ವಿದ್ಯಾರ್ಥಿಗಳಿಗೆ ಹೊಡೆಯುತ್ತಿದ್ದರು ಎಂಬ ಕಾರಣಕ್ಕೆ, ಆ ಶಾಲೆಯನ್ನು ಬಿಡಿಸಿ, 'ಮೈನ್ ಮಿಡ್ಲ್ ಸ್ಕೂಲ್' ಎಂಬ ಕನ್ನಡ ಶಾಲೆಗೆ ಸೇರಿಸಿದರು. ಅಧ್ಯಯನದಲ್ಲಿ ಚುರುಕಾಗಿದ್ದ ಕರೀಂಖಾನ್ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅಷ್ಟರಲ್ಲಿ ತಂದೆ ತೀರಿಕೊಂಡರು. ಅವರ ಅಣ್ಣ ಸೋದರನನ್ನು ವಿದ್ಯಾಭ್ಯಾಸ ಮುಂದುವರಿಸುವ ಸದುದ್ದೇಶದಿಂದ ಹಾಸನದ ಪ್ರೌಢಶಾಲೆಗೆ ಸೇರಿಸಿದರು. ಮನೆಯ

ಬಡತನದಿಂದ ಪ್ರೌಢಶಾಲೆಯ ಶಿಕ್ಷಣವನ್ನು ಪೂರ್ತಿ ಮಾಡಲು ಆಗಲಿಲ್ಲ. ಶಿಕ್ಷಣ ನಿಂತಿತು. ವಿಧಿಯಿಲ್ಲದೆ ಸೋದರರೊಡನೆ ವ್ಯಾಪಾರದಲ್ಲಿ ತಲ್ಲೀನರಾಗಲು ಪ್ರಯತ್ನಿಸಿದರು. ಆದರೆ ಆ ಕಾಯಕ ಕೈ ಹತ್ತಲಿಲ್ಲ. ಮನಸ್ಸಿಗೂ ಹತ್ತಲಿಲ್ಲ. ಓದುವ ಗೀಳು ಮರೆಯಾಗಲಿಲ್ಲ. ಪುಸ್ತಕಗಳನ್ನು ಹುಡುಕಿಕೊಂಡು ಹೋಗಿ, ಎರವಲು ತಂದು ಓದುತ್ತಿದ್ದರು.

ಶಾಲೆಯಲ್ಲಿ ಕಲಿತ ಕನ್ನಡ, ಇಂಗ್ಲಿಷ್ ಭಾಷೆಗಳ ಜೊತೆಗೆ ಸ್ವಂತ ಆಸಕ್ತಿಯಿಂದ ಉರ್ದು, ಪರ್ಷಿಯನ್ ಭಾಷೆಗಳನ್ನು ಕಲಿತರು. ಸಂಸ್ಕೃತ ಪಂಡಿತರಾಗಿದ್ದ ಆಚಂಗಿ ಎಚ್.ವಿ. ನಾರಾಯಣ ಶಾಸ್ತ್ರಿಗಳಿಂದ ಸಂಸ್ಕೃತ ಭಾಷೆಯನ್ನು ಕಲಿತು ಬಾಣಭಟ್ಟನ ಸಂಸ್ಕೃತ ಕಾದಂಬರಿ ಕಾವ್ಯವನ್ನು ಓದುವಂತಾದರು. ಇಸ್ಲಾಂ ಧರ್ಮಾಧ್ಯಯನದ ಜೊತೆಗೆ ಹಿಂದು ಧರ್ಮ ಪುರಾಣ ಕಾವ್ಯಗಳ ಪರಿಚಯ ಮಾಡಿಕೊಂಡರು. ಅವರ ಮನಸ್ಸು ವ್ಯಾಪಾರದಿಂದ ವಿಮುಖವಾಗಿ ಸಾಹಿತ್ಯ ಕಲೆಗಳ ಕಡೆಗೆ ಹೊರಳಿತು.

ಮಹಾತ್ಮ ಗಾಂಧೀಜಿಯವರು ಬೆಂಗಳೂರಿಗೆ ಬಂದಿದ್ದಾಗ ಹಲವು ಯುವಕರಂತೆ ಕರೀಂಖಾನ್ ಗಾಂಧೀಜಿಯವರ ದರ್ಶನ ಪಡೆದು ಅವರ ಪ್ರಭಾವಕ್ಕೆ ಒಳಗಾದರು; ಖಾದಿಧಾರಿಯಾದರು. ರಾಷ್ಟ್ರ ಪ್ರಜ್ಞೆಯನ್ನು ಮೈಗೂಡಿಸಿಕೊಂಡರು. ಸ್ವಾತಂತ್ರ್ಯ ಹೋರಾಟದ ಕಥೆಗಳನ್ನು ಕೇಳುವುದು, ವೃತ್ತ ಪತ್ರಿಕೆಗಳಲ್ಲಿ ಅಂಥ ಸುದ್ದಿಗಳನ್ನು ಆಸಕ್ತಿಯಿಂದ ಓದುವುದು ಹೆಚ್ಚಾಯಿತು. ಅವರಿಗೆ ಅರಿವಿಲ್ಲದಂತೆ ದೇಶಭಕ್ತರಾಗಿ ರೂಪುಗೊಂಡರು.

ಅಬ್ದುಲ್ ರೆಹಮಾನ್ ಖಾನ್ ದಂಪತಿಗಳಿಗೆ ಹುಟ್ಟಿದ ಮಕ್ಕಳಲ್ಲಿ ಅಳಿದು ಉಳಿದವರು ಐದು ಮಂದಿ : ಖಾದರ್ ಖಾನ್, ಖಲಂದರ್ ಖಾನ್, ಕರೀಂಖಾನ್, ರಹೀಂಖಾನ್ ಮತ್ತು ಜಬ್ಬಾರ್ ಖಾನ್.

ಅವರನ್ನು ಪಂಚ ಪಾಂಡವರು ಎನ್ನುತ್ತಿದ್ದರು. ಎಲ್ಲರೂ ಗಟ್ಟಿಮುಟ್ಟಾಗಿ ಜಟ್ಟಿಗಳಂತೆ ಕಾಣುತ್ತಿದ್ದರು. ಗರಡಿ ಮನೆಯ ಅಂಗಸಾಧನೆ, ನೆರೆಹೊರೆಯ ಲೋಕಾನುಭವ, ಸ್ನೇಹಿತರೊಡನೆ ಫುಟ್‌ಬಾಲ್ ಆಟ, ಹೇಮಾವತಿ ನದಿಯಲ್ಲಿ ಈಜುಗಾರಿಕೆ ಅವರ ದೇಹದಾರ್ಢ್ಯಕ್ಕೆ, ಮನೋವಿಕಾಸಕ್ಕೆ ಕಾರಣವಾಗಿದ್ದವು. ಅಣ್ಣ ತಮ್ಮಂದಿರು ಯಾವಾಗಲೂ ಒಗ್ಗಟ್ಟಾಗಿರುತ್ತಿದ್ದರು.

ಕರೀಂಖಾನ್ ಸಕಲೇಶಪುರದ ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಒಂದೆರಡು ತಿಂಗಳು ಹಂಗಾಮಿ ಕನ್ನಡ ಶಿಕ್ಷಕರಾಗಿದ್ದರು. ಮಕ್ಕಳು ಶಾಲೆಗೆ ಶುಚಿಯಾಗಿ ಬರಬೇಕು, ತಲೆಬಾಚಿರಬೇಕು, ಒಗೆದ ಬಟ್ಟೆಗಳನ್ನು ಧರಿಸಬೇಕು, ನೈರ್ಮಲ್ಯಕ್ಕೆ ಗಮನಕೊಡಬೇಕು, ಉತ್ಸಾಹದಿಂದಿರಬೇಕು, ಮುತುವರ್ಜಿಯಿಂದ ವಿದ್ಯಾಭ್ಯಾಸ ಮಾಡಬೇಕೆಂದು ತಿಳಿಯಹೇಳುತ್ತಿದ್ದರು. ಮಕ್ಕಳ ಪಠ್ಯೇತರ ಚಟುವಟಿಕೆಗಳಿಗೆ ಗಮನ ಕೊಡುತ್ತಿದ್ದರು. ಆದರೆ ಅವರು ಶಾಲಾ ಶಿಕ್ಷಕರಾಗಿ ಮುಂದುವರಿಯಲು ಆಗಲಿಲ್ಲ.

ಕರೀಂಖಾನ್ ಹೊಟ್ಟೆಪಾಡಿಗಾಗಿ ಸಾಹಿತ್ಯ ರಚನೆಗೆ ತೊಡಗಿದರು. ಗುರು ಆಚಂಗಿ ಎಚ್.ವಿ. ನಾರಾಯಣ ಶಾಸ್ತ್ರಿಗಳ ಪ್ರಭಾವ ಪ್ರೇರಣೆ ಬೀರಿತು. ಜನಪದ ಗೀತೆಗಳ ಸಂಗ್ರಹಕ್ಕೆ ತೊಡಗಿದರು. ಅದಕ್ಕಾಗಿ ಹಾಡುಗಾರರ ಬೆನ್ನುಹತ್ತಿ ಊರೂರು ಅಲೆಯತೊಡಗಿದರು. ಜವಳಿ ವ್ಯಾಪಾರದಲ್ಲಿ ಗಮನ ಕೊಡುತ್ತಿರಲಿಲ್ಲ. ಸಂಸಾರಕ್ಕೆ ಹೊರೆಯಾದರು. ಊರಿನಲ್ಲಿದ್ದಾಗ ತಮ್ಮ ಜವಳಿ ಅಂಗಡಿಯ ಮೇಲೆ ಕಾಂಗ್ರೆಸ್ ಧ್ವಜವನ್ನು ಹಾರಿಸುತ್ತಿದ್ದರು. ಚಳವಳಿಗಾರರ ಜೊತೆ ಸೇರಿಕೊಂಡು ಪ್ರಭಾತ್ ಫೇರಿ ನಡೆಸುತ್ತಿದ್ದರು. ಇದರಿಂದಾಗಿ ಪೋಲೀಸರ ಕಣ್ಣಿಗೆ ಬಿದ್ದರು.

ಯಾವುದಾದರೂ ವೃತ್ತಿಗೆ ಪ್ರಯತ್ನಿಸುತ್ತಿದ್ದರು, ಅದಕ್ಕಾಗಿ ಅಲೆಯುತ್ತಿದ್ದರು. ಮೈಸೂರು, ಉಡುಪಿ, ಧಾರವಾಡಗಳಲ್ಲಿ ಕೆಲವುಕಾಲ

ಪತ್ರಕರ್ತರಾಗಿ ದುಡಿದರು. ಅದೂ ಕೂಡ ಜೀವನಕ್ಕೆ ಆಧಾರವಾಗಲಿಲ್ಲ. ಸಾಹಿತ್ಯ ರಚನೆ, ಜನಪದ ಗೀತಸಂಗ್ರಹ, ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳುವಿಕೆ, ನೌಕರಿಗಾಗಿ ಅಲೆದಾಟಗಳಲ್ಲಿ ಕಾಲಕಳೆಯಿತು. ಚಳವಳಿಗಾರರಾದುದರಿಂದ ಪೋಲೀಸರ ಕಾಟ ಹೆಚ್ಚಾಯಿತು. ಮನೆಯವರಿಗೆ ತೊಂದರೆಯಾಯಿತು. ಸಂಸಾರಕ್ಕೆ ಆಧಾರವಾಗಿದ್ದ ಜವಳಿ ಅಂಗಡಿ ಮುಟ್ಟುಗೋಲಾಯಿತು. ತಮ್ಮಿಂದ ಮನೆಯವರಿಗೆ ತೊಂದರೆಯೆಂದು ಮನೆಬಿಟ್ಟುಹೊರಟರು. ಅವಿವಾಹಿತರಾಗಿರಲು ನಿರ್ಧರಿಸಿದರು. ಹುಟ್ಟೂರಿನ ಮನೆಗೆ ಪರಕೀಯರಾದರು.

ಕರೀಂಖಾನ್ ನೌಕರಿಗಾಗಿ ಮುಂಬೈಗೆ ತೆರಳಿದರು. ಇಂಡಿಯನ್ ನೇವಿಯಲ್ಲಿ ಕೆಲಸಕ್ಕೆ ಸೇರಿ ಒಂದು ವರ್ಷ ಸೇವೆ ಸಲ್ಲಿಸಿದರು. ಕಾಂಗ್ರೆಸ್ ಚಳವಳಿಗಾರನೆಂದು ಗೊತ್ತಾಗಿ ನೌಕರಿ ಕಳೆದುಕೊಂಡರು. ನೌಕರಿಯಿಂದ ಬಿಡುಗಡೆಯಾದರೂ ಸ್ಟಾರ್, ಸೇವಾಪತ್ರ ದೊರಕಿತು. ಬರಿಗೈಯಲ್ಲಿ ಹಿಂದಿರುಗಿದರು.

ಮಹಾತ್ಮ ಗಾಂಧೀಜಿಯವರು 'ಬ್ರಿಟಿಷರೇ ಭಾರತ ಬಿಟ್ಟು ಹೊರಡಿ' ಘೋಷಣೆ ಮಾಡಿದಾಗ ಕರೀಂಖಾನ್ ಮನಃಪೂರ್ವಕವಾಗಿ ಪ್ರಭಾವಿತರಾಗಿ ಸಕ್ರಿಯವಾಗಿ ಸ್ವಾತಂತ್ರ್ಯ ಚಳವಳಿಗೆ ಪ್ರವೇಶಿಸಿದರು. ಗಾಂಧಿಟೋಪಿ ಧರಿಸಿ, ಕಾಂಗ್ರೆಸ್ ಪ್ರಚಾರಕ್ಕೆ ತೊಡಗಿದರು. 'ಕ್ವಿಟ್ ಇಂಡಿಯಾ' ಚಳಿವಳಿಯಿಂದ 'ಮೈಸೂರು ಚಲೋ' ಚಳವಳಿಯವರೆಗೆ ವಿವಿಧ ಚಳವಳಿಗಳಲ್ಲಿ ಭಾಗವಹಿಸಿ ಹಲವು ಬಾರಿ ಸೆರೆಮನೆ ವಾಸ ಅನುಭವಿಸಿದರು. ಜವಾಬ್ದಾರಿ ಸರಕಾರ ಬಂದ ಮೇಲೆ 'ಭಾರತ ಸೇವಾದಳ'ದ ಕಾರ್ಯಕರ್ತರಾಗಿ ಕೆಲಸ ಮಾಡಿದರು. ಕಾಂಗ್ರೆಸ್ ಪಕ್ಷದ ಪ್ರಚಾರಕ್ಕಾಗಿ, ಕರ್ನಾಟಕ ಏಕೀಕರಣಕ್ಕಾಗಿ ಹೃತ್ಪೂರ್ವಕವಾಗಿ

ಶ್ರಮಿಸಿದರು. ಆದರೆ ರಾಜ್ಯ ಸರಕಾರದಲ್ಲಿ ಯಾವ ಸ್ಥಾನಮಾನವೂ ಸಿಗಲಿಲ್ಲ. ಹೊಟ್ಟೆ ಹೊರೆಯುವುದಕ್ಕೆ ಸಾಹಿತ್ಯವನ್ನು ಅವಲಂಬಿಸಿದರು. ಚಲನಚಿತ್ರ ಕ್ಷೇತ್ರಕ್ಕೆ ಪ್ರವೇಶಿಸಿದರು. ನಿರೀಕ್ಷಿಸಿದ ಫಲ ನೀಡಲಿಲ್ಲ. ಬೆಂಗಳೂರಿಗೆ ಹಿಂದಿರುಗಿದರು. ಅವಿವಾಹಿತರಾಗಿ, ಏಕಾಂಗಿಯಾಗಿ, ಅನಿಕೇತರಾಗಿ ಜೀವನಸಾಗಿಸಿದರು. ಹೋಟೆಲೊಂದರ ಬಾಡಿಗೆ ಕೊಠಡಿಯಲ್ಲಿ ಉಳಿದು, ಮನಸ್ಸಿಗೆ ಬಂದಿದ್ದದ್ದನ್ನು, ಅವರಿವರು ಕೇಳಿದ್ದನ್ನು ಬರೆದು ಕಾಲ ನೂಕಿದರು.

ಕರೀಂಖಾನ್ ತಮ್ಮ ಇಳಿವಯಸ್ಸಿನಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಅಭೂತಪೂರ್ವವಾಗಿ, ಅರ್ಥಪೂರ್ಣವಾಗಿ ಸೇವೆಸಲ್ಲಿಸಿದರು. ಅನೇಕ ಪದವಿ ಪ್ರಶಸ್ತಿಗಳು ಅರಸಿಕೊಂಡು ಬಂದವು. ಉದಾಹರಣೆಗೆ: ಕಲಬುರ್ಗಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ, (1989), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಯಮಿಯಿಂದ ವಿಶೇಷ ಪ್ರಶಸ್ತಿ (1992), ರಾಜ್ಯಸರ್ಕಾರದಿಂದ ಜಾನಪದಶ್ರೀ ಪ್ರಶಸ್ತಿ (1994), ಡಾ.ಜೀ.ಶಂ.ಪ. ಪ್ರಶಸ್ತಿ (1995), ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಪ್ರಶಸ್ತಿ (1996), ರಾಜ್ಯ ಸರಕಾರದಿಂದ ಚಲನಚಿತ್ರದ ಜೀವಮಾನ ಸೇವೆಗೆ ವಿಶೇಷ ಕೊಡುಗೆ ರಾಜ್ಯ ಪ್ರಶಸ್ತಿ (2002–03), ಡಾ.ಎಲ್. ಬಸವರಾಜು ಪ್ರಶಸ್ತಿ (2003), ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ (2004), ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೆಂಪೇಗೌಡ ಪ್ರಶಸ್ತಿ (2006), ಚಿತ್ರದುರ್ಗದ ಬೃಹನ್ಮಠದಿಂದ 'ಜಾನಪದ ಜಂಗಮ' ಪ್ರಶಸ್ತಿ (1998) – ಮೊದಲಾದವು ಮುಖ್ಯವಾಗಿವೆ.

ಕನ್ನಡ ಜನಮನದಲ್ಲಿ ಹಸುರಾಗಿ ನಿಂತ ವರ್ಣರಂಜಿತ ವ್ಯಕ್ತಿತ್ವದ ಸಕಲೇಶಪುರದ ಖಾನ್ ಸಾಹೇಬ್ ಕರೀಂಖಾನ್ ದಿನಾಂಕ 29–07–

2006 ರಂದು ಬೆಂಗಳೂರಿನಲ್ಲಿ ಸಹೋದರರ ಮನೆಯಲ್ಲಿ ವಿಧಿವಶರಾದರು. ಅವರ ತುಂಬು ಜೀವನ ಸಾಧನೆ ಕನ್ನಡಿಗರಿಗೆ ಸ್ಫೂರ್ತಿಯ ಸೆಲೆಯಾಗಿದೆ; ಅನುಕರಣೆಯ ಆದರ್ಶವಾಗಿದೆ.

ಎರಡು

ಎಸ್.ಕೆ. ಕರೀಂಖಾನ್ ಸೃಜನಶೀಲ ಲೇಖಕರಾಗಿ ಕಥೆ, ನಾಟಕ, ಕಾದಂಬರಿ, ಕವಿತೆಗಳನ್ನು ವಿಶೇಷವಾಗಿ ಬರೆದಿದ್ದಾರೆ. ಅವರ ಕಥಾ ಸಂಗ್ರಹಗಳು: ನೀವಾರ (1949), ನೀಹಾರ (1953); ನಾಟಕಗಳು: ನಿರ್ದೋಷಿ (1954), ಮಾಗಡಿ ಕೆಂಪೇಗೌಡ (1959), ಬೆಂಗಳೂರು ಕೆಂಪೇಗೌಡ (1984), ಶ್ರೀ ಕೃಷ್ಣ ಲೀಲಾ (1997); ಕಾದಂಬರಿ : ಬಲಿದಾನಿ ಹುಸೇನ್ (1955); ಭಕ್ತಿಗೀತೆಗಳು : ಶ್ರೀ ಗೊಮ್ಮಟೇಶ್ವರ, ಧರ್ಮಸ್ಥಳದ ಶ್ರೀ ಮಂಜುನಾಥ, ಕೊಲ್ಲೂರು ಮೂಕಾಂಬಿಕೆ ಮೊದಲಾದವು ಜನಪ್ರಿಯವಾಗಿವೆ.

ಕರೀಂಖಾನರಿಗೆ ಅಪಾರವಾದ ಜನಮನ್ನಣೆ ತಂದುಕೊಟ್ಟಿದ್ದು ಅವರ ಜನಪದ ಗೀತ ಸಂಗ್ರಹ ಮತ್ತು ಗಾಯನ ಪ್ರಸಾರ. ಜಾನಪದ ಕ್ಷೇತ್ರಕ್ಕೂ ಕರೀಂಖಾನರ ಬದುಕಿಗೂ ಅವಿನಾಸಂಬಂಧವಿದೆ. ಜಾನಪದಕ್ಕೆ ಅವರು ಗಂಟುಬಿದ್ದರೋ ಜಾನಪದವೇ ಅವರಿಗೆ ಗಂಟುಬಿದ್ದಿತೋ ಹೇಳುವುದಕ್ಕಾಗದಷ್ಟು ಜಾನಪದಕ್ಕೂ ಅವರಿಗೂ ಹೊಂದಾಣಿಕೆಯಿದೆ. ಪ್ರೌಢಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ್ದ ಕರೀಂಖಾನ್ ಜಾನಪದಕ್ಕೆ ಹೊರಳಿದ್ದು ಆಕಸ್ಮಿಕ. ಕರೀಂಖಾನ್ ಗ್ರಾಮೀಣ ಪ್ರತಿಭೆ. ಗ್ರಾಮೀಣರ ನಡುವೆ ಹುಟ್ಟಿ ಬೆಳೆದವರು. ಹುಟ್ಟೂರು ಸಕಲೇಶಪುರದ ಬಗೆಗೆ ಅವರಿಗೆ ಇನ್ನಿಲ್ಲದ ಅಭಿಮಾನ. ಸಕಲೇಶಪುರದ ಗಲ್ಲಿಗಲ್ಲಿಯೂ ಪ್ರತಿಮನೆಯೂ ಪ್ರತಿಮನೆಯವರೂ ಅವರಿಗೆ ಗೊತ್ತು. ಸಕಲೇಶಪುರದ

ಸಂತೇಮಾಳ ಅವರ ಲೋಕಾನುಭವದ ಕಣಜ. ಹಾಸನ, ಮಡಿಕೇರಿ, ಚಿಕ್ಕಮಗಳೂರು ಜಿಲ್ಲೆಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವರದು ಆತ್ಮೀಯ ಕಾಯಕ. ಹಿಂದುಗಳ ಪ್ರತಿಯೊಂದು ಸಾಂಸ್ಕೃತಿಕ ಕಾರ್ಯಕ್ರಮಕ್ಕೂ ಅವರು ಹಾಜರು. ಅವರು ಕೇವಲ ಮುಸಲ್ಮಾನರಲ್ಲ; ಸೌಹಾರ್ದ ಸೇತುವಾದ ಮುಸಲ್ಮಾನ ಕನ್ನಡಿಗರು.

ಕರೀಂಖಾನ್ ಮನೆಯವರು ವಾಸವಾಗಿದ್ದ ಸಕಲೇಶಪುರದ ಮನೆಯ ಮುಂದೆ ಸ್ವಲ್ಪ ಬಯಲು. ಶ್ರವಣಬೆಳಗೊಳದ ಕಡೆಯ ಕಂಚುಗಾರರು ಗಾಡಿಕಟ್ಟಿಕೊಂಡು ವ್ಯಾಪಾರಕ್ಕೆ ಬರುತ್ತಿದ್ದರು. ಹಗಲೆಲ್ಲಾ ವ್ಯಾಪಾರ ಮಾಡಿ, ಸಾಯಂಕಾಲ ಬಯಲಿನಲ್ಲಿ ಬೀಡುಬಿಡುತ್ತಿದ್ದರು. ಅಲ್ಲೇ ಊಟ ಮಾಡಿ, ರಾತ್ರಿಯ ಹೊತ್ತು ಬೆಳದಿಂಗಳ ಬೆಳಕಿನಲ್ಲಿ, ಕಾಲ ಕಳೆಯಲು ಕೋಲಾಟವಾಡುತ್ತಿದ್ದರು. ಜನಪದ ಗೀತೆಗಳನ್ನು ಹಾಡುತ್ತಿದ್ದರು. ಮನೆಯ ಜಗಲಿಯ ಮೇಲೆ ಕುಳಿತ ಕರೀಂಖಾನ್ ಅನಾಯಾಸವಾಗಿ ಹಳ್ಳಿಗರ ಕೋಲಾಟ ನೋಡಿದರು. ಜನಪದ ಗೀತೆಗಳನ್ನು ಕೇಳಿದರು. ಅಲ್ಪಸ್ವಲ್ಪ ಸಂಗೀತ ಜ್ಞಾನವಿದ್ದ ಅವರಿಗೆ ಕನ್ನಡ ಜನಪದ ಗೀತೆಗಳು ಮನಸ್ಸಿಗೆ ನಾಟಿದವು. ಮತ್ತೆ ಮತ್ತೆ ಕೇಳಿದರು. ಕಂಚುಗಾರರು ಹೋದಕಡೆಗೆಲ್ಲಾ ಹಿಂಬಾಲಿಸಿದರು. ಅವುಗಳನ್ನು ಬರೆದುಕೊಳ್ಳಲು ಪ್ರಯತ್ನಿಸಿದರು. ಬರೆದುಕೊಂಡ ಮೇಲೆ ಹಳ್ಳಿಗರಂತೆ ಮೂಲಧಾಟಿಯಲ್ಲಿ ಹಾಡಲು ಮೊದಲುಮಾಡಿದರು. ಮೂರು ಹೊತ್ತೂ ಅದರದೇ ಧ್ಯಾನವಾಯಿತು. ಹೆಗಲಿಗೊಂದು ಬ್ಯಾಗು, ಅದರಲ್ಲಿ ಕಾಗದ, ಪೆನ್ನು. ಹಬ್ಬ ಹರಿದಿನಗಳಲ್ಲಿ, ಮದುವೆ ಮುಂಜಿಗಳಲ್ಲಿ, ಕೋಲಾಟದ ಮೇಳಗಳಲ್ಲಿ ಹಳ್ಳಿಗರನ್ನು ಪರಿಚಯ ಮಾಡಿಕೊಂಡು ಜನಪದ ಗೀತೆಗಳನ್ನು ಸಂಗ್ರಹಿಸಿದರು. ಸುಶ್ರಾವ್ಯವಾಗಿ ಹಾಡುವುದಕ್ಕೆ ಪ್ರಾರಂಭಿಸಿದರು. ಹಾಡುಗಾರಿಕೆಯಿಂದ, ಗೀತ ಸಾಹಿತ್ಯದ

ವ್ಯಾಖ್ಯಾನದಿಂದ ಹಳ್ಳಿಗರಿಗೆ ಹತ್ತಿರವಾದರು. ಪರಿಚಯಸ್ಥರು ಕರೀಂಖಾನರನ್ನು ಕಂಡರೆ ಹಾಡು ಹೇಳಿಸಿ ಕೇಳಲು ದುಂಬಾಲುಬೀಳುತ್ತಿದ್ದರು. ಕರೀಂಖಾನ್ ಬೇಸರಗೊಳ್ಳದೆ ಹಾಡಿ, ಕೇಳುಗರನ್ನು ಸಂತೋಷ ಪಡಿಸುತ್ತಿದ್ದರು. ಹಬ್ಬ ಹರಿದಿನ, ಭಜನೆ ಮಂದಿರ, ಮದುವೆ ಮುಂಜಿಗಳಲ್ಲೂ ಹಾಡಿದರು. ಯಾವ ವಾದ್ಯವನ್ನೂ ಬಳಸದೆ ಕಂಠಶ್ರೀಯಿಂದ ಸುಶ್ರಾವ್ಯವಾಗಿ ಹಾಡುವುದು ಕರಗತವಾಯಿತು. ಹಳ್ಳಿಯ ಹರಿಜನ, ಒಕ್ಕಲಿಗ ಸ್ತ್ರೀ ಪುರುಷರಿಂದ ಸಂಗ್ರಹಿಸಿದ ಗೀತೆಗಳು ಅವರ ಜೋಳಿಗೆ ತುಂಬಿದವು. ನಿಜವಾದ ಅರ್ಥದಲ್ಲಿ ಅವರು ಜಾನಪದ ಜೋಗಿಯಾದರು.

ಕರೀಂಖಾನ್ ಸಂಗ್ರಹಿಸಿದ್ದು ಮೈಸೂರು ಸಂಸ್ಥಾನದಲ್ಲಿ ಜನಬಳಕೆಯಲ್ಲಿದ್ದ ಹಾಡುಗಳು, ಮುಖ್ಯವಾಗಿ ಹಾಸನ ಜಿಲ್ಲಾ ಪರಿಸರದವು. ಒಬ್ಬ ಮುಸಲ್ಮಾನ ಯುವಕ ಹಿಂದೂ ಜನರಿಂದ ಹಾಡು ಸಂಗ್ರಹಿಸುವುದು ಅಷ್ಟು ಸುಲಭವಾಗಿರಲಿಲ್ಲ. ಅವರೇ ಹೇಳಿಕೊಂಡಂತೆ ಕರೀಂಖಾನರ ಸಂಗ್ರಹಾನುಭವ ಹೀಗಿದೆ: "ಹಳ್ಳಿಯ ಹಾಡುಗಾರರು ಮೊದಮೊದಲು ನಾಚಿಕೊಳ್ಳೋರು. ಅದು ಹೆಚ್ಚಾಗಿ ಜನಪದ ಸಾಹಿತ್ಯಾನ ಕಾಪಾಡಿಕೊಂಡು ಬಂದಿರೋರು, ಈ ಹರಿಜನ ಮಹಿಳೆಯರು. ಅವರು ನಮ್ಮಂಥವರ ಮುಂದೆ ಹೇಳಬೇಕಾದರೆ ನಾಚಿಕೊಳ್ಳೋರು, ಮುಜುಗರ ಮಾಡಿಕೊಳ್ಳೋರು. ಅದರಿಂದ ಸ್ವಲ್ಪ ಸಲಿಗೆ ಮಾಡಿಕೊಳ್ಳಬೇಕು. ಒಂದು ಸೀರೇನೋ ಕುಬಸಾನೋ ತಗೊಂಡು ಹೋಗಿ ಕೊಡಬೇಕು, ಎಲೆ ಅಡಿಕೆ ಕಡ್ಡೀಪುಡಿ ಕೊಡಬೇಕು, ಅವರ ಮನೆಯ ಗಂಡಸರು 'ಪರವಾಗಿಲ್ಲ ನೀ ಹೇಳು' ಅನ್ನೋ ಮಟ್ಟಿಗೆ. ಆ ಸಲಿಗೆ ಮೇಲೆ ಅವರು ಹೇಳ್ತಾ ಹೋಗೋವ್ರು. ಆವಾಗ ಸಂಗ್ರಹ ಮಾಡಬಹುದು, ಹಾಗೆ ಮಾಡಿದೆ".

ಕರೀಂಖಾನ್ ತಾವು ಸಂಗ್ರಹಿಸಿದ ಜನಪದ ಗೀತೆಗಳನ್ನು ವಿಷಯವಾರು ವಿಂಗಡಿಸಿ, ಒಪ್ಪುವಂತಹ ಶೀರ್ಷಿಕೆ ನೀಡಿ, ಜನಪದ ಛಂದಸ್ಸು, ಪಲ್ಲವಿ ಚರಣಗಳನ್ನು ಗಮನಿಸಿ, ಅಚ್ಚುಕಟ್ಟಾಗಿ ಜೋಡಿಸಿ, ಒಟ್ಟು ಪುಸ್ತಕಕ್ಕೆ 'ಜನಪದ ಗೀತೆ' ಎಂದು ಹೆಸರಿಟ್ಟು 1955ರಲ್ಲಿ ಪ್ರಕಟಿಸಿದರು. ಇದು ಅವರ ಮೊದಲ ಜನಪದ ಗ್ರಂಥ. ಇದರಲ್ಲಿ ನಲವತ್ತೇಳು ಗೀತೆಗಳಿವೆ. ಗೀತೆಗಳ ಶೀರ್ಷಿಕೆಗಳು ಹೀಗಿವೆ: ರಾಗಿಕಲ್ಲು ಪದ, ಬೆನವಣ್ಣ, ಗಣನಾಯ್ಕ, ಸಂಸ್ಕೃತಿ, ಶಿವ, ಮುಂಜಾನೆಯ ಪ್ರಾರ್ಥನೆ, ಬೀರೇ ದೇವರು, ನಾಮದಯ್ಯ, ಹನುಮ, ಸೋಲಿಸಬೇಡ ಗೆಲಿಸಯ್ಯ, ಮಾರಮ್ಮ, ತೇರು, ಗರುಡಾಳ, ಜವರಾಯ, ಹೊಗಳಿಕೆ, ಕೋಲು, ಕಪ್ಪಾದ ಹೆಣ್ಣು, ಗೆಣೆಯ ಗೆಣತಿ, ವಿಧವೆ, ಬೆಳ್ಳೂರ್ ಬಣಜಿಗ, ತೌರು, ಉತ್ತರ ದೇವಿ, ಕೋಣವೇಗೌಡ, ಕಾವಲಿಯ ಹಾಡು, ದ್ರೌಪದಿ ವಸ್ತ್ರಾಪಹರಣ, ಬಿರುಗಾಳಿ, ದೊಂಬರ ಚೆನ್ನಿ, ಬಡವಿಯ ಗೋಳು, ಜಂಭದ ಮುರಾರಿ, ಒಪ್ಪಂದ, ಅತ್ತೇಮನೆಯಲ್ಲಿ, ಕೊರವಂಜಿ, ಸೋದ್ರತ್ತೆ ಮಗಳು, ಗೌರಿದೇವಿ ತವರಿಗೆ ಹೋಗಿ ಬಂದದ್ದು, ಹರಕೆ, ಗೌರೀ ಹಬ್ಬಕ್ಕೆ ಹೋದುದು, ತಾಯಿಯ ಬುದ್ಧಿವಾದ, ಜೋಗುಳ, ತಂಗಿ ನೀ ಬರಬೇಕು ಮದುವೇಗೆ, ಮಗಳಿಗೆ ತಾಯಿಯ ಬುದ್ಧಿವಾದ, ಮಗಳು ಗಂಡನ ಮನೆಗೆ ಹೊರಡುವಾಗ, ವಿಯೋಗದುಃಖ, ಬಸವಣ್ಣ, ಕತ್ತಲೆರಾಯನ ಪದ, ನೀತಿ, ಬಳೆಗಾರ ಮತ್ತು ತೌರಿನ ಘನತೆ.

ಈ ಸಂಗ್ರಹ ಗ್ರಂಥದಲ್ಲಿ ದೇವರ ಪದ, ಕೋಲಾಟದ ಪದ, ಬೀಸುವ ಪದ, ಸೋಬಾನೆ ಪದ, ಪೌರಾಣಿಕ ಪದ, ಜೋಗುಳ ಪದ, ಸಾಮಾಜಿಕ ಪದ, ಸಾಂಸಾರಿಕ ಪದ, ನೀತಿ ಪದ, ಕಥನ ಕಾವ್ಯ – ಮೊದಲಾದವು ಸೇರಿವೆ. ಕೆಲವು ಮೊದಲ ಬಾರಿಗೆ ಸಿಕ್ಕಿರುವ ಪಠ್ಯಗಳಾಗಿವೆ.

ಮೊದಲ ಗ್ರಂಥದ ಗೀತೆಗಳ ಜೊತೆಗೆ ಹತ್ತೊಂಬತ್ತು ಗೀತೆಗಳನ್ನು ಸೇರಿಸಿ, ಒಟ್ಟು ಅರವತ್ತಾರು ಗೀತೆಗಳ ಸಂಗ್ರಹಕ್ಕೆ 'ಜನಪದ ಗೀತೆ ಭಾಗ ಎರಡು' ಎಂದು ಹೆಸರಿಸಿ 1959ರಲ್ಲಿ ಪ್ರಕಟಿಸಿದೆ.

ಈ ಎರಡೂ ಸಂಗ್ರಹಗಳಲ್ಲಿರುವ ಕೆಲವು ಗೀತೆಗಳನ್ನು ಒಳಗೊಂಡು ಐದಾರು ಪುಸ್ತಕಗಳು ಪ್ರಕಟವಾಗಿವೆ. ಎರಡು ಪುಸ್ತಕಗಳಿಗೆ ಸಂಗ್ರಾಹಕರು ಒಪ್ಪಿಗೆ ನೀಡಿದ್ದಾರೆ. ಉಳಿದವು ಕರೀಂಖಾನರ ಒಪ್ಪಿಗೆಯಿಲ್ಲದೆ ಪ್ರಕಟವಾಗಿವೆ. ಅಷ್ಟೇ ಅಲ್ಲದೆ ಪ್ರಕಾಶಕರೇ ಅಧಿಕೃತ ಮಾರಾಟಗಾರರೆಂದು ಘೋಷಿಸಿದ್ದಾರೆ!

ಕರೀಂಖಾನ್ ತಾವು ಸಂಗ್ರಹಿಸಿ ಪ್ರಕಟಿಸಿದ ಜನಪದ ಗೀತೆಗಳ ಪುಸ್ತಕಗಳನ್ನು ಸ್ವತಃ ಹೊತ್ತುಕೊಂಡು ಊರೂರು ಸುತ್ತಿ ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಜೀವನ ಸಾಗಿಸಿದರು. ಅವರು ಸಾಮಾನ್ಯವಾಗಿ ಭಾನುವಾರದಂದು ಶಾಲಾಕಾಲೇಜುಗಳ ವಿದ್ಯಾರ್ಥಿನಿಲಯಗಳಿಗೆ ಹೋಗಿ, ಜನಪದ ಗೀತೆಗಳನ್ನು ಹಾಡಿ, ವ್ಯಾಖ್ಯಾನಿಸಿ ತಮ್ಮ ಪುಸ್ತಕಗಳನ್ನು ಮಾರುತ್ತಿದ್ದರು. ಎಂಟು ಆಣೆ ಅಥವಾ ಒಂದು ರೂಪಾಯಿಯ ಪುಸ್ತಕಗಳನ್ನು ವಿದ್ಯಾರ್ಥಿಗಳು ಸಂತೋಷವಾಗಿ ಕೊಳ್ಳುತ್ತಿದ್ದರು. ಜನಪದ ಗೀತೆ ಪುಸ್ತಕಗಳು ತಮಗೆ ಅನ್ನ ನೀಡಿದವು ಎಂದು ಕರೀಂಖಾನ್ ಸಂಕೋಚವಿಲ್ಲದೆ ಹೇಳಿಕೊಳ್ಳುತ್ತಿದ್ದರು.

ಬೀಸುವ ಪದ, ಕೋಲಾಟದ ಪದ, ಬಳೆಗಾರ, ಮಗಳಿಗೆ ತಾಯಿಯ ಬುದ್ಧಿವಾದ, ಮಗಳು ಗಂಡನ ಮನೆಗೆ ಹೊರಡುವಾಗಿನ ಪದ, ನೀತಿಪದ, ಕೊಣವೇಗೌಡ, ಜವರಾಯ ಮೊದಲಾದ ಜನಪದ ಗೀತೆಗಳು ಕರೀಂಖಾನರಿಂದಾಗಿ ಮೈಸೂರು ಸಂಸ್ಥಾನದ ಕನ್ನಡಿಗರ

ಮನೆಮಾತಾದವು. ಹಾಡುಗಾರಿಕೆಯ ಜೊತೆಗೆ, ಜನಪದ ಗೀತೆಗಳ ವ್ಯಾಖ್ಯಾನ ಅವರ ವಿಶೇಷವಾಗಿತ್ತು.

ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಕಾಂಗ್ರೆಸ್ ಕಾರ್ಯಕರ್ತರಾದ ಕರೀಂಖಾನ್ ಹಲವು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ಸಭೆಗೆ ಜನರನ್ನು ಕೂಡಿಸಲು ಲಾವಣಿಗಳನ್ನು ಹಾಡಿಸುವುದು ರೂಢಿಯಾಗಿತ್ತು. ಎಸ್. ವಿಷಕಂಠರಾವ್, ಬಿ.ನೀಲಕಂಠಯ್ಯ ಮೊದಲಾದ ಲಾವಣಿಕಾರರು ಕಾಂಗ್ರೆಸ್ ಪರವಾದ ಲಾವಣಿಗಳನ್ನು ಹಾಡುತ್ತಿದ್ದರು. ಕರೀಂಖಾನ್ ಯಾವ ವಾದ್ಯವೂ ಇಲ್ಲದೆ ತಾವು ಸಂಗ್ರಹಿಸಿ ಕಲಿತಿದ್ದ ಜನಪದ ಗೀತೆಗಳನ್ನು ಎತ್ತರಿಸಿದ ದನಿಯಲ್ಲಿ ಅರ್ಥಪೂರ್ಣವಾಗಿ ಹಾಡುತ್ತಿದ್ದರು. ಹಾಡಿನ ಮೋಡಿಗೆ ಮಾರುಹೋಗಿ ಜನರು ಸೇರುತ್ತಿದ್ದರು. ಜನರು ಸೇರಿದ ಸಂದರ್ಭದಲ್ಲಿ ಕರೀಂಖಾನ್ "ನೀವೆಲ್ಲಾ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕು, ನೀವು ಕಾಂಗ್ರೆಸ್ ಪಕ್ಷದ ಸದಸ್ಯರಾಗಬೇಕು, ಖಾದಿ ವಸ್ತ್ರ ಧರಿಸಬೇಕು, ಸ್ವಾತಂತ್ರ್ಯ ಬಂದರೆ ಎಲ್ಲರೂ ಚೆನ್ನಾಗಿ ಬದುಕಬಹುದು" ಎಂದು ಭಾಷಣ ಮಾಡುತ್ತಿದ್ದರು. ಕರೀಂಖಾನರನ್ನು ತಮ್ಮೊಡನೆ ಕರೆದುಕೊಂಡು ಹೋಗಲು ಕಾಂಗ್ರೆಸ್ ನಾಯಕರು ಇಷ್ಟಪಡುತ್ತಿದ್ದರು.

ಕರ್ನಾಟಕ ಏಕೀಕರಣ ಪ್ರಚಾರಕ್ಕೂ ಕರೀಂಖಾನ್ ದನಿಗೂಡಿಸಿದರು. ಆ ಸಭೆಗಳಲ್ಲೂ ಜನಪದ ಗೀತೆಗಳನ್ನು ಹಾಡುವುದರ ಮೂಲಕ ಜನರನ್ನು ಆಕರ್ಷಿಸುತ್ತಿದ್ದರು. ಬಳ್ಳಾರಿ, ಬೀದರ್ ಪ್ರದೇಶಗಳಲ್ಲಿ ಕನ್ನಡ, ಉರ್ದು ಎರಡು ಭಾಷೆಗಳಲ್ಲೂ ಭಾಷಣ ಮಾಡಿ ಏಕೀಕರಣಕ್ಕೆ ಬೆಂಬಲ ಕೋರಿದರು. ಸ್ವಾತಂತ್ರ್ಯ ಸಂಗ್ರಾಮ ಹಾಗೂ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಪ್ರಚಾರಕ್ಕಾಗಿ ಜನಪದ ಗೀತೆಗಳನ್ನು

ವಿಶೇಷವಾಗಿ ಬಳಸಿದ ಏಕೈಕ ವ್ಯಕ್ತಿ ಕರೀಂಖಾನ್. ಅವರಿಗೆ ಗೊತ್ತಿಲ್ಲದಂತೆ ಕರೀಂಖಾನ್ ಜಾನಪದ ಅನ್ವಯಿಕತೆಗೆ ಸಾಕ್ಷಿಯಾಗಿದ್ದರು.

ಕರೀಂಖಾನ್ ತಾವು ಸಂಗ್ರಹಿಸಿದ ಎಲ್ಲಾ ಜನಪದ ಗೀತೆಗಳನ್ನೂ ಪುಸ್ತಕರೂಪದಲ್ಲಿ ಪ್ರಕಟಿಸಿಲ್ಲ. ಅವರು ಪ್ರಕಟಿಸಿದ ಗೀತೆಗಳು ಇನ್ನೂರು ಪುಟಗಳನ್ನು ಮೀರುವುದಿಲ್ಲ. ಅವರ ನೆಲೆಯಿಲ್ಲದ ಅಲೆಮಾರಿ ಜೀವನದಲ್ಲಿ ಅವರು ಸಂಗ್ರಹಿಸಿದ್ದ ಸಾಹಿತ್ಯ ಕಳೆದುಹೋಯಿತು ಎನ್ನುತ್ತಾರೆ. ಯಾರೋ ಒಬ್ಬರು ತೆಗೆದುಕೊಂಡು ಹೋದರು ಎಂದೂ ಹೇಳುವುದುಂಟು. ಜನಪದ ಗೀತ ಸಂಗ್ರಹದ ಪ್ರಾರಂಭದ ದಿನಗಳಲ್ಲಿ ಸಂಗ್ರಹಿಸಿದವರಲ್ಲಿ ಕರೀಂಖಾನರೂ ಒಬ್ಬರೆಂಬುದಂತೂ ನಿಜ. ಕೆ.ಆರ್. ಲಿಂಗಪ್ಪನವರಂತೆ ಹಾಡುವುದರ ಮೂಲಕ, ವ್ಯಾಖ್ಯಾನಿಸುವುದರ ಮೂಲಕ ಜನಪದ ಗೀತೆಗಳ ಪ್ರಚಾರ ಕಾಯಕ ಮಾಡಿದ್ದು ಅವರ ಹೆಚ್ಚುಗಾರಿಕೆ. ಒಂದು ರೀತಿಯಲ್ಲಿ ಅವರು ಅರೆವೃತ್ತಿಗಾಯಕರ ಗುಂಪುಗೆ ಸೇರುವಂಥವರು. ಜನಪದ ಗೀತ ಗಾಯನದಿಂದಲೇ ಕೆಲವು ಕಾಲ ಜೀವನ ಸಾಗಿಸಿದ್ದು ಸಾಹಸದ ಮಾತು.

ಕರೀಂಖಾನರದು ಪ್ರೌಢಶೈಲಿ ಅಥವಾ ಸಂಸ್ಕೃತ ಭೂಯಿಷ್ಠ ಶೈಲಿ. ಜನಪದ ಸಾಹಿತ್ಯವನ್ನು ಕುರಿತು ಬರೆಯುವಾಗ, ಮಾತಾಡುವಾಗ ಅದೇ ಧಾಟಿಯನ್ನು ಬಳಸುತ್ತಿದ್ದರು. ಅವರ 'ಜನಪದ ಗೀತೆ' ಮೊದಲ ಗ್ರಂಥದ ಬೆನ್ನುಡಿಯಲ್ಲಿ ಜನಪದ ಗೀತೆಯೆಂದರೆ ಏನೆಂಬುದನ್ನು ಹೀಗೆ ವರ್ಣಿಸಿದ್ದಾರೆ:

"ವರಕವಿಯು ಭಾವೋನ್ಮತ್ತನಾಗಿ, ಅಗೋಚರ ಶಕ್ತಿಯಿಂದ ಪ್ರಚೋದಿತನಾಗಿ ತನ್ನ ಲೇಖನಿಯ ಝರಿಯಿಂದ ಸಾಹಿತ್ಯದ

ಸುಧಾಸ್ತೋತ್ರವನ್ನು ಹರಿಸುವಂತೆ, ಹಳ್ಳಿಯ ರೈತರು ಸಮಾಜದ ಹೊಲದಲ್ಲಿ ಅನುಭವದ ಬಿತ್ತನೆಯನ್ನು ಬಿತ್ತು ಜಗತ್ಕಲ್ಯಾಣದ ಬೆಳೆಯನ್ನೇನು ಬೆಳೆದರೋ ಅದೇ ಜನಪದ ಸಾಹಿತ್ಯವು. ಹಳ್ಳಿಗರ ಹೃದಯದ ಕೋಟರದಿಂದ ಹೊರಟು ಅವರ ಜಿಹ್ವೆಯ ಟೊಂಗೆಗಳ ಮೇಲೆ ಕುಳಿತು, ಲೋಕಪ್ರಿಯ ಕರ್ಣ ಮನೋಹರ ರಾಗಗಳನ್ನು ಆಲಾಪಿಸಿದ ಕೋಕಿಲಾನೀಕಗಳೇ ಜನಪದ ಗೀತೆಗಳು. ಜನಪದ ಗೀತೆಗಳು ರಾಗಿ ಕಲ್ಲಿನ ಗಂಭೀರ ನಿಸ್ವನ ಸ್ರೋತದೊಂದಿಗೆ, ವೇಣುವಿನ ಮಧುರ ನಿಕ್ವಣ ಲಹರಿಯೊಂದಿಗೆ, ಕೋಲಿನ ಹೃದಯೋಲ್ಲಾಸಿತ ನಾದಧುನಿಯೊಂದಿಗೆ ಗಾನತರಂಗಿಣಿಯಾಗಿ ಪ್ರವಹಿಸುತ್ತದೆ. ಜನಪದ ಸಾಹಿತ್ಯವು ಹಳ್ಳಿಗರ ನೈತಿಕ ಔನ್ನತ್ಯದ ತುಹಿನಗಿರಿಯಾಗಿ, ಅವರ ಅನುಭವದ ರತ್ನಾಕರವಾಗಿ, ಅವರ ಧರ್ಮಶ್ರದ್ಧೆಯ ದಿವ್ಯಧಾಮವಾಗಿ ನಾಡಿನಲ್ಲೆಲ್ಲಾ ಆರಾಜಿಸುತ್ತದೆ."

ಕರೀಂಖಾನ್ ಜನಪದ ಸಾಹಿತ್ಯ ವ್ಯಾಖ್ಯಾನಕ್ಕೆ ಅಗಾಧವಾದ ಭಾಷಾ ಮರ್ಯಾದೆಯನ್ನು ತಂದುಕೊಟ್ಟರು. ಅವರ ದೃಷ್ಟಿಯಲ್ಲಿ ಅಭಿವ್ಯಕ್ತಿಗೆ, ಚಿಂತನೆಗೆ, ಜೀವನ ಮೌಲ್ಯಕ್ಕೆ ಶಿಷ್ಟ ಸಾಹಿತ್ಯಕ್ಕೂ ಜನಪದ ಸಾಹಿತ್ಯಕ್ಕೂ ವ್ಯತ್ಯಾಸವಿಲ್ಲ. ಮಾತ್ರವಲ್ಲ ಶಿಷ್ಟಪದರಿಗೂ ಜನಪದರಿಗೂ ಭೇದವಿಲ್ಲ. ಲೋಕಾನುಭವ ಗಳಿಕೆಯಲ್ಲಿ, ಸಾಹಿತ್ಯ ಸೃಷ್ಟಿಯಲ್ಲಿ ಇಬ್ಬರೂ ಸರಿಸಮಾನರು.

ಕರೀಂಖಾನ್ ಜನಪದ ಸಾಹಿತ್ಯ ಸಂಗ್ರಹಕ್ಕೆ ತೊಡಗಿದ ಸಂದರ್ಭ, ಸಂಗ್ರಹದ ಅಡ್ಡಿ ಆತಂಕ, ಜನಪದರ ಸ್ಥಿತಿಗತಿ, ಜನಪದ ಕಾಳಜಿ ಮೊದಲಾದವುಗಳ ಬಗೆಗೆ ತಮ್ಮ ಮೊದಲ ಸಂಗ್ರಹ ಗ್ರಂಥದಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ:

"ಜನಪದ ಸಾಹಿತ್ಯವನ್ನು ಸಂಗ್ರಹಿಸುವುದೆಂದರೆ ಜಾತ್ರೆಯಲ್ಲಿ ಕಳೆದುಹೋದ ಹಸುಳೆಗಳನ್ನು ಹುಡುಕಿ ಅವರವರ ಪೋಷಕರ ವಶಕ್ಕೊಪ್ಪಿಸುವಂತಹ ಶ್ರಮಸಾಧ್ಯವಾದ ಕಾರ್ಯವು. ಕನ್ನಡಿಗರ ದುರ್ದೈವದಿಂದಾಗಿ ಜನಪದ ಸಾಹಿತ್ಯವು ಗ್ರಂಥಸ್ಥವಾಗಿ ಉಳಿಯಲಿಲ್ಲ. ತಮ್ಮ ಸೌಭಾಗ್ಯದಿಂದ ನಿರಸ್ತರಾಗಿ ಕಾಲದೋಷದಿಂದ ಅವಿದ್ಯೆ, ಅಜ್ಞಾನ, ದರಿದ್ರತೆಯ ಪ್ರಪಾತಕ್ಕೆ ಬಲವಾಗಿ ದೂಡಲ್ಪಟ್ಟ ನತದೃಷ್ಟ ಹಳ್ಳಿಗರು ಸಂಪೂರ್ಣವಾಗಿಯೂ ತಮ್ಮ ಸಾಹಿತ್ಯವನ್ನು ಮರೆತರು. ಆದರೂ ಸಾಹಿತ್ಯ ಸೇವಾಧುರಂದರರು ಕೆಲವರು ಮುಂದೆ ಬಂದರು. ಅವರು ಛಿನ್ನಭಿನ್ನವಾಗಿ ಅಳಿದು ಉಳಿದಿದ್ದ ಜನಪದ ಸಾಹಿತ್ಯವನ್ನು ಆತುರದಿಂದ ಆಯ್ದು ಅದಕ್ಕೆ ಜೀವಕಳೆಯನ್ನು ಕೊಟ್ಟರು. ಕರ್ನಾಟಕದ ಹಳ್ಳಿಗಾಡಿನ ನಮ್ಮ ಪೂರ್ವಿಕರ ವಿದ್ಯೆ, ಸಂಸ್ಕೃತಿ, ನಾಗರಿಕತೆ, ನೈತಿಕ ಹಾಗೂ ಧಾರ್ಮಿಕ ವಿಚಾರಗಳಲ್ಲಿದ್ದ ಪರಿಪೂರ್ಣ ಅಭಿಜ್ಞತೆಯನ್ನು ಮತ್ತೊಮ್ಮೆ ಬೆಳಕಿಗೆ ತಂದರು".

ಕರ್ನಾಟಕದ ಉದ್ದಗಲಕ್ಕೂ ಚೆಲ್ಲಾಡಿದ ಸಾಹಿತ್ಯರಾಶಿಯನ್ನೆಲ್ಲಾ ಕಲೆಹಾಕಲು ಸಂಗ್ರಾಹಕರಿಂದ ಸಾಧ್ಯವಾಗಲಿಲ್ಲ. ಪದ್ಯಸಾಹಿತ್ಯ ಅಲ್ಪಸ್ವಲ್ಪ ಸಂಗ್ರಹವಾದರೂ ಪದ್ಯೇತರ ಸಾಹಿತ್ಯ ಅಂದರೆ ಜಾನಪದದ ಸರ್ವಾಂಗ ಸಾಹಿತ್ಯ ಸಂಗ್ರಹವಾಗಲಿಲ್ಲ. ಅದಕ್ಕೆ ಕರೀಂಖಾನ್ ಕಂಡುಕೊಂಡ ಕಾರಣಗಳು ಹೀಗಿವೆ :

"ವೀರ ಕರುಣಾರಸ ಪ್ರಧಾನವಾಗಿಯೂ ನೀತಿಬೋಧಕವಾಗಿಯೂ ಇದ್ದ ಜನಪದ ಕತೆಗಳು ಇನ್ನೂ ಅಷ್ಟಾಗಿ ಸಂಗ್ರಹಿಸಲ್ಪಡಲಿಲ್ಲ. ಇದರ ಪ್ರಬಲ ಕಾರಣವೆಂದರೆ, ಜನಪದ ಸಾಹಿತ್ಯ ಸಂಗ್ರಹಣವನ್ನು ತಮ್ಮ ಐಚ್ಛಿಕ ಧ್ಯೇಯವಾಗಿಟ್ಟುಕೊಂಡು ಶ್ರಮಿಸುತ್ತಿದ್ದವರನೇಕರು ಸಾಕಷ್ಟು

ಉತ್ತೇಜನ ಲಭಿಸದಿದ್ದುದರಿಂದ ನಿರುತ್ಸಾಹವಾದರು. ಸರ್ಕಾರದ ದೃಷ್ಟಿಯೂ ಅನುಗ್ರಹವೂ ಗ್ರಾಮೋದ್ಧಾರದ ಕಡೆಗೆ ಹೊರಳಿದ ಮೇಲೆ, ಹಳ್ಳಿಗರ ಮನೋಗತವನ್ನರಿಯದ, ಅವರ ಬೇಕು-ಬೇಡಗಳನ್ನು ತಿಳಿಯದ, ಶ್ರಮಜೀವಿಗಳೊಡನೆ ಸಂಪರ್ಕವಿಲ್ಲದ ದಲ್ಲಾಳಿಗಳೂ ಮೇಸ್ತ್ರಿಗಳೂ ಗ್ರಾಮಕಲೆ, ಗ್ರಾಮವಿದ್ಯೆ, ಗ್ರಾಮ ಸಂಸ್ಕೃತಿಯ ಉದ್ಧಾರದ ಕೂಗನ್ನು ಕೂಗಿದರು. ಈ ನಗರವಾಸಿಗಳ ನಾಟಕೀಯ ವರ್ತನೆಗಳಿಂದ ಜಿಹಾಸೆಗೊಂಡ ಸಂಗ್ರಾಹಕರನೇಕರು ತಮ್ಮ ಪ್ರಯತ್ನವನ್ನು ಪೂರ್ಣವಾಗಿ ಬಿಟ್ಟರು.

ವಸ್ತು ನೀತಿಯೇನೇ ಇದ್ದರೂ ಜನಪದ ಸಾಹಿತ್ಯ ಸಂಗ್ರಹಣಾ ಕಾರ್ಯಕ್ಕೆ ಮಾತ್ರ ಆಘಾತವುಂಟಾಯಿತು. ಏಕೆಂದರೆ ಯಾರ ಹೃದಯಗಳು ಗ್ರಾಮ ಸಾಹಿತ್ಯದ ಭಂಡಾರಗಳಾಗಿದ್ದವೋ ಅಂತಹ ವಯೋವಂತರನೇಕರು ಇಹವ್ಯಾಪಾರವನ್ನು ತ್ಯಜಿಸಿ ಹೋದರು. ಅವರೊಡನೆಯೇ ಅವರ ಅಪಾರ ಸಂಗ್ರಹವೂ ನಿರಂತರಕ್ಕಾಗಿ ಹೊರಟುಹೋಯಿತು."

ಕರೀಂಖಾನರಿಗೆ ಜನಪದ ಸಾಹಿತ್ಯ ಸಂಗ್ರಜದ ಬಗೆಗೆ ಸ್ಪಷ್ಟವಾದ ಕಲ್ಪನೆಯಿತ್ತು. ಅದರ ಇತಿಮಿತಿಯೂ ತಿಳಿದಿತ್ತು. ತಮ್ಮಿಂದ ಸಾಧ್ಯವಾದಷ್ಟು ಸಂಗ್ರಹ ಮಾಡಿ, ಪ್ರಕಟಿಸಿ, ಧನ್ಯರಾದರು.

ಕರೀಂಖಾನ್ ಸಭೆ ಸಮಾರಂಭಗಳಲ್ಲಿ ಜನಪದ ಗೀತೆಗಳನ್ನು ಹಾಡಿದ ಮೇಲೆ ತಮಗೆ ಪ್ರಿಯವಾದ ಗೀತೆಗಳನ್ನು ಉದಾಹರಿಸಿ, ತಮಗೆ ತಿಳಿದಂತೆ ವ್ಯಾಖ್ಯಾನಿಸುತ್ತಿದ್ದರು. ಒಂದೆರಡು ಉದಾಹರಣೆಗಳನ್ನು ನೋಡಬಹುದು :

ಮಂದೇನು ಕೊಟ್ಟೀತು ಮನೆವೇನು ತಣಿದೀತು
ಮುಂಜಾನದಾಗ ಗಿರಿಮಲ್ಲ – ಕೊಟ್ಟರೆ
ಮನ ತುಂಬಿ ನನ್ನ ಮನೆ ತುಂಬಿ

"ಇದೇ ಜನಪದ ಸಾಹಿತ್ಯದ ಜೀವಜೀವಾಳ ! ಭದ್ರಬುನಾದಿ; ಮೂಲ ಮಂತ್ರ! ಭಗವಂತನೊಬ್ಬನೇ ಶ್ರೀಮಂತ; ನಿತ್ಯದಾನಿ. ಬಡವನಿರಲಿ, ಬಲ್ಲಿದನಿರಲಿ – ಆ ದಯಾಧರ್ಮದ ದಾತಾರನ ಕರುಣಾದ್ವಾರದಲ್ಲಿ ಸೆರಗೊಡ್ಡಿ ನಿಂತಿರುವ ಭಿಕ್ಷುಕರು. ಆ ಕರುಣಾಳು ಒಲಿದರೆ ಕೀರ್ತಿ ಗೌರವಗಳು ಪ್ರಾಪ್ತವಾಗುತ್ತವೆ. ಪತ್ನಿ ಪುತ್ರರು ಲಭಿಸುತ್ತಾರೆ. ಪದವಿ ಸಂಪತ್ತುಗಳು ದೊರೆಯುತ್ತವೆ. ಆ ಮಹಿಮಾಮಯ ಮುನಿದರೆ ಮಾನವ ನಿಸ್ಸಹಾಯಕ, ನಿರ್ಗತಿಕ, ನಿರಾಶ್ರಿತನಾಗುತ್ತಾನೆ. ಆದ್ದರಿಂದ ಬೇಡಿದರೆ ಆ ಗಿರಿಮಲ್ಲ ಎಂದರೆ ಶ್ರೀ ಶೈಲದ ಮಲ್ಲಿಕಾರ್ಜುನನಲ್ಲಿ ಬೇಡಬೇಕು. ಅವನನ್ನು ಮರೆತು ಮಾನವರಲ್ಲಿ ಬೇಡಿದರೆ ಭಿಕ್ಷುಕ ಭಿಕ್ಷುಕನಲ್ಲಿ ಬೇಡಿದಂತೆ".

ರಾಗಿ ದೇವಾನೆ ಲೋಲ ಸಂಪನ್ನಾನೆ
ಸೋಗೆಲ್ಲಾ ಮುತ್ತು ನವರತುನಾ – ರಾಗೀದೇವಾ
ತೂಗಿ ಬೆಳೆಯೋ ನಮ್ಮ ಹೊಲದಲ್ಲಿ.

"ರೈತನ ಪಾಲಿಗೆ ಹೊಟ್ಟೆ ತುಂಬುವ ಜೀವ ಉಳಿಸುವ ರಾಗಿಯೇ ದೇವರು. ರಾಗಿಯ ತೆನೆಯಲ್ಲಿರುವುದು ಕೇವಲ ರಾಗಿಯ ಕಾಳಲ್ಲ. ಸಾಕ್ಷಾತ್ ಜಾತಿಮುತ್ತು ಹಾಗೂ ನವರತ್ನ. ರಾಗಿ ಎಂದರೆ ರೈತನಿಗೆ ಅಭಿಮಾನ"

ರಾಗಿ ಕಲ್ಲಿನ ಮೇಲೆ ಚೆಲ್ಲಿದೆ ನಮ್ಮ ಹಾಡು

ಬಲ್ಲಂತ ಜಾಣರು ಬರಕೊಳ್ಳಿ – ನಮ್ಮ ಹಾಡ
ಬಳ್ಳ ತಕ್ಕೊಂಡು ಅಳಕೊಳ್ಳಿ.

"ಹಳ್ಳಿಯ ಹೆಣ್ಣು ಮಗಳು ರಾಗಿ ಬೀಸುವಾಗ ಹೀಗೆ ಹೇಳುತ್ತಾಳೆ: ರಾಗಿ ಕಲ್ಲಿನಿಂದ ಉಗಮಗೊಂಡ ಹಾಡು-ಗೀತೆಗಳು ಚೆಲ್ಲಾಡಿ ಹೋಗುತ್ತಿವೆ. ಬಲ್ಲಂಥ ಎಂದರೆ ವಿದ್ಯಾವಂತರು, ಜಾಣರು, ಎಷ್ಟು ಬೇಕೋ ಅಷ್ಟನ್ನು ಬರೆದುಕೊಳ್ಳಿ; ಬಳ್ಳ ಬಳ್ಳಗಳಲ್ಲಿ ತುಂಬಿ ತುಂಬಿ ಅಳೆದುಕೊಳ್ಳಿ ಈ ಹಾಡುಗಳನ್ನು ಎಂದು".

ಅಡುವಾಗ ಇಕ್ಕುವಾಗ ಅಡವಿಯೆಲ್ಲ ನೆಂಟರು
ಅಡವಿಯ ಸೊಪ್ಪು ಮೆಲುವಾಗ – ತಮ್ಮಯ್ಯ
ನೆಂಟರು ಗುರುತ ಮರೆತಾರು.

"ಸಿರಿತನಕ್ಕೂ ಬಡತನಕ್ಕೂ ಬಲ್ಲಿದರಿಗೂ ಬಡವರಿಗೂ ಇರುವ ವ್ಯತ್ಯಾಸ ಹಳ್ಳಿಗರ ಅನುಭವದಲ್ಲಿ ಹೀಗೆ ಹಾಡಾಗಿದೆ : ನಮ್ಮ ಕೈ ಚೆನ್ನಾಗಿ ನಡೆಯುವಾಗ, ಮತ್ತೊಬ್ಬರಿಗೆ ಕರೆದು ಕೊಡೋ ಸ್ಥಿತಿಯಲ್ಲಿರುವಾಗ ಅಡವಿಯಲ್ಲಿರುವವರೂ ನಮ್ಮ ನೆಂಟರು ಎಂದು ಹೇಳಿಕೊಂಡು ಬರುತ್ತಾರೆ. ಆದರೆ ನಮಗೆ ಬಡತನ ಬಂದು ಅಡವಿಯ ಸೊಪ್ಪು ತಿನ್ನುವ ದುಸ್ಥಿತಿಗೆ ಇಳಿದರೆ ನಿಜವಾದ ನೆಂಟರೂ ಗುರುತು ಇಲ್ಲದವರಂತೆ ದೂರವಾಗುತ್ತಾರೆ".

ಇದು ಪ್ರತಿಯೊಬ್ಬರ ಜೀವನದಲ್ಲಿ ಒಂದಲ್ಲಾ ಒಂದು ಸಾರಿ ಅನುಭವಕ್ಕೆ ಬರುವ ವಿಷಯವಾಗಿದೆ. ಗಹನವಾದ ವಿಚಾರವನ್ನು ಸರಳವಾಗಿ ನಿರೂಪಿಸುವ ಧ್ವನಿಪ್ರಚುರತೆ ಇಲ್ಲಿದೆ. ಇಂಥ ಗೀತೆಗಳೆಂದರೆ ಕರೀಂಖಾನರಿಗೆ ಅಪಾರ ಒಲವು.

ಕರೀಂಖಾನರಿಗೆ ಜನಪದ ಸಾಹಿತ್ಯ ಗಾಢವಾದ ಪರಿಣಾಮ ಬೀರಿತ್ತು. ಅದರ ಅಸ್ಮಿತೆಯ ಬಗೆಗೆ, ಅದರ ಶಾಶ್ವತತೆಯ ಬಗೆಗೆ, ಬದುಕಿನ ಅವಿಭಾಜ್ಯ ಅಂಗವಾಗಿರುವ ಬಗೆಗೆ ಹೆಮ್ಮೆ ಇತ್ತು. ಒಂದೆಡೆ ಹೀಗೆ ಹೇಳಿದ್ದಾರೆ : "ರಾಜಾಶ್ರಯವಿಲ್ಲದಿದ್ದರೂ ಕೂಡ ಜನಪದ ಸಾಹಿತ್ಯ ವಿಪುಲವಾಗಿ ಬೆಳೆಯುತ್ತಾ ಹೋಯಿತು. ಕಾರಣವಿಷ್ಟೇ. ಅದಕ್ಕೆ ಜನಾಶ್ರಯವಿತ್ತು. ಜನರು ತಮ್ಮ ಹಬ್ಬ ಹರಿದಿನಗಳಲ್ಲಿ, ಆಚಾರ-ವಿಚಾರಗಳಲ್ಲಿ, ಜಾತ್ರೆ ಸಮಾರಂಭಗಳಲ್ಲಿ, ವಿವಾಹಾದಿ ಆಚರಣೆಗಳಲ್ಲಿ ಇದನ್ನು ತಮ್ಮೊಂದಿಗೆ ಹೆಣೆದುಕೊಂಡಿದ್ದಾರೆ. ಆದ್ದರಿಂದ ಜನಪದ ಸಾಹಿತ್ಯಕ್ಕೆ ಅಳಿಗಾಲವಿಲ್ಲ. ಈ ಸಾಹಿತ್ಯ ಜಗದಾದ್ಯಂತದವರೆಗೂ ಬೆಳೆಯುತ್ತಲೇ ಬಾಳುತ್ತದೆ".

ಇತ್ತೀಚೆಗೆ ಜನಪದಾಸಕ್ತರಂತೆ ಶಿಷ್ಟಪದ ಪಂಡಿತರೂ ಜನಪದದ ಬಗೆಗೆ ಗಮನಕೊಡುತ್ತಿರುವುದು ಕರೀಂಖಾನರಿಗೆ ಸಂತೋಷ ಮೂಡಿಸಿತ್ತು: "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು ಎಂದು ನಂಬಿದ್ದ ಹಳ್ಳಿಗರ ಜೀವನವಿಧಾನ, ಸುಖ-ಸಮ್ಮಾನ, ದುಃಖ-ದುಮ್ಮಾನಗಳನ್ನೆಲ್ಲಾ ಭಗವಂತನಿಗೆ ಅರ್ಪಿಸಿ ಪಾಪ ಭೀರುಗಳಾಗಿ ಬಾಳುತ್ತಿದ್ದ ಪಾಮರರ ಈ ಸಾಹಿತ್ಯ ಇತ್ತೀಚೆಗೆ ಪಂಡಿತರ ಗಮನವನ್ನೂ ಸೆಳೆದಿರುವುದು ನಿಜಕ್ಕೂ ಸ್ವಾಗತಾರ್ಹವು". ಜೀವನದ ಉದ್ದಕ್ಕೂ ಕರೀಂಖಾನ್ ಜಾನಪದದ ಪಕ್ಷಪಾತಿಯಾಗಿ ನಡೆದುಕೊಂಡರು.

ಕರೀಂಖಾನ್ ತಮ್ಮ ಪ್ರಥಮ 'ಜನಪದ ಗೀತೆ' ಸಂಗ್ರಹ ಪ್ರಕಟಿಸುವ ಮುನ್ನ 'ನೀಹಾರ' ಕಥಾ ಸಂಗ್ರಹದಲ್ಲಿ ಹೀಗೆ ಪ್ರಕಟಣೆ ನೀಡಿದ್ದರು (1953) : "ಸತ್ಯಾತ್ಮರೂ ಧರ್ಮಾತ್ಮರೂ ಸತ್ಕರ್ಮನಿರತರೂ ಮಹೋದಾರಿಗಳೂ ಪರಹಿತಚಿಂತಕರೂ ಕರುಣಾಶೀಲರೂ ಭಗವಧ್ಯಾನ

ತುಂದಿಲರೂ ಆಗಿದ್ದ ನಮ್ಮ ಪೂರ್ವಕಾಲದ ಹಳ್ಳಿಗಾಡಿನವರ ವಿದ್ಯೆ, ಸಂಸ್ಕೃತಿ, ನಾಗರೀಕತೆಯನ್ನು ಸರಳಸುಂದರವಾಗಿ ಅವರದೇ ಆದ ಸಹಜ ಶೈಲಿಯಲ್ಲಿ ರೂಪಿಸುವ ಕವನ ಸಂಗ್ರಹ". ಜನಪದ ಸಾಹಿತ್ಯ ಸೃಷ್ಟಿಕರ್ತರಾದ ಹಳ್ಳಿಗರ ಬಗೆಗೆ ಕರೀಂಖಾನ್‌ರಿಗಿದ್ದ ಉದಾತ್ತ ಭಾವನೆ ಇಲ್ಲಿ ವೇದ್ಯವಾಗುತ್ತದೆ.

ಎಸ್.ಕೆ. ಕರೀಂಖಾನ್ ಜಾನಪದ ಸಂಗ್ರಾಹಕರು, ಜಾನಪದ ಪರಿಚಾರಕರು. ಆಧುನಿಕ ಮಾನದಂಡದಲ್ಲಿ ಅವರು ಜಾನಪದ ವಿದ್ವಾಂಸರಲ್ಲ; ಜಾನಪದ ಸೂತ್ರಕಾರರಲ್ಲ. ಅವರು ಜಾನಪದ ಮಹೋನ್ನತಿಗೆ ಮಾರುಹೋಗಿದ್ದರು. ಇತರರೂ ಮಾರುಹೋಗುವಂತೆ ಮಾಡಿದರು. ಆ ನಂತರದ ಜನಪದ ಸಂಗ್ರಾಹಕರಿಗೆ, ಜನಪದ ಹಾಡುಗಾರಿಕೆ ಪ್ರೇರಕರಾದರು. ಅವರಿಂದ ಹಲವು ಜನಪದ ಭಾವಗೀತೆಗಳು ಉಳಿದುಕೊಳ್ಳಲು, ಮರುಹುಟ್ಟು ಪಡೆಯಲು ಸಹಾಯವಾಯಿತು. ಜನಪದ ಗಾಯಕ ಗಾಯಕಿಯರಿಗೆ, ಶಿಷ್ಟ ಗಾಯಕರಿಗೆ ಸರಿಸಮನಾಗಿ ಗೌರವ ಸಂಭಾವನೆ, ಸನ್ಮಾನ, ಪ್ರಶಸ್ತಿ ದೊರಕಬೇಕೆಂದು ಕರೀಂಖಾನ್ ಬಯಸುತ್ತಿದ್ದರು. ಕಲೆಯಲ್ಲಿ ಭೇದಭಾವ ಮಾಡುವುದು ತಪ್ಪು ಎಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು.

ಕರೀಂಖಾನ್ ಮಾಗಡಿ ಕೆಂಪೇಗೌಡ, ಬೆಂಗಳೂರು ಕೆಂಪೇಗೌಡ ಎಂಬ ಎರಡು ಚಾರಿತ್ರಿಕ ನಾಟಕಗಳನ್ನು ಬರೆದಿದ್ದಾರೆ. ಅವು ಹೆಸರಿಗೆ ಮಾತ್ರ ಚಾರಿತ್ರಿಕ ನಾಟಕ, ಪಾತ್ರಗಳು ಮಾತ್ರ ಚಾರಿತ್ರಿಕ. ನಾಟಕದಲ್ಲಿ ಕಾಲ್ಪನಿಕ ಹಾಗೂ ಜಾನಪದ ಅಂಶಗಳು ತುಂಬಿಕೊಂಡಿವೆ. 'ಬೆಂಗಳೂರು ಕೆಂಪೇಗೌಡ' ಎಂಬ ದೀರ್ಘಲಾವಣಿಯಲ್ಲೂ ಜನಪದ ಅಂಶಗಳು ಹೇರಳವಾಗಿವೆ. ಬೆಂಗಳೂರು ಕೆಂಪೇಗೌಡನಿಗೆ 'ಮಾಹಾಗಡಿ

ಕೆಂಪೇಗೌಡ' ಎಂಬ ಬಿರುದಿತ್ತೆಂಬ ಅಂಶವನ್ನು ಪ್ರಸ್ತಾಪಿಸಿರುವುದು ಗಮನಾರ್ಹವಾಗಿದೆ. ಕರೀಂಖಾನ್‌ರ ಅತ್ಯುತ್ತಮ ಸಾಮಾಜಿಕ ನಾಟಕ 'ನಿರ್ದೋಷಿ' ಯಲ್ಲಿ ಹಾಸನ ಜಿಲ್ಲೆಯ ಆಡುಮಾತುಗಳು, ನುಡಿಗಟ್ಟುಗಳು ಹೇರಳವಾಗಿವೆ. ಇವು ಭಾಷಿಕ ಜಾನಪದದ ಅಧ್ಯಯನಕ್ಕೆ ಉಪಯುಕ್ತ ಮಾಹಿತಿಯಾಗುತ್ತವೆ. ಕರೀಂಖಾನ್‌ರ ಎಲ್ಲಾ ರೀತಿಯ ಸಾಹಿತ್ಯ ರಚನೆಯಲ್ಲೂ ಜಾನಪದದ ಒಳಹರಿವು ತೆಳುವಾಗಿಯೋ ತೋರವಾಗಿಯೋ ಇರುವುದುಂಟು.

ಕರೀಂಖಾನ್ ಹತ್ತುವರ್ಷ (1960–1970) ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ಕೆಲಸ ಮಾಡಿದರು. ಅವರು ಸಂಗ್ರಹಿಸಿದ್ದ ಸ್ವರ್ಣಕಾಳಿಂಗ ಅಥವಾ ಕನಕ ಕಾಳಿಂಗ ಎಂಬ ಜನಪದ ಕಥೆ 'ಸ್ವರ್ಣಗೌರಿ' ಚಲನಚಿತ್ರವಾಯಿತು. ಆ ಸಿನಿಮಾದ ಕಥೆ, ಚಿತ್ರಕಥೆ, ಸಂಭಾಷಣೆ, ಹಾಡುಗಳು ಕರೀಂಖಾನರಿಗೆ ಸೇರಿದವು. ಅವರು ಬರೆದಿರುವ ಹಲವು ಚಲನಚಿತ್ರ ಗೀತೆಗಳಲ್ಲಿ ಜನಪದ ಧಾಟಿಗಳು ತುಂಬಿಕೊಂಡಿವೆ.

ಎಸ್.ಕೆ.ಕರೀಂಖಾನ್ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದುದು ಅವರ ಜೀವನದ ಪ್ರಮುಖ ಘಟ್ಟ (1987–90). ಜಾನಪದಕ್ಕೆ ಸಂಬಂಧಿಸಿದಂತೆ ತಮ್ಮ ಬಹುದಿನದ ಕನಸನ್ನು ನನಸು ಮಾಡಿಕೊಳ್ಳಲು ಒದಗಿದ ಸುವರ್ಣಾವಕಾಶ. ಅವರು ಹಿಂದಿನ ಅಧ್ಯಕ್ಷರಾದ ಎಚ್.ಎಲ್.ನಾಗೇಗೌಡರು ಪ್ರಾರಂಭಿಸಿದ ಉಪಯುಕ್ತ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಮುಂದುವರಿಸಿದುದರ ಜೊತೆಗೆ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಸಾಕಾರಗೊಳಿಸಿದ್ದು ವಿಶೇಷ. ಅಕಾಡೆಮಿ ಕಾರ್ಯಾಲಯದ ಯುವಕ ಸಿಬ್ಬಂದಿಯೊಡನೆ ಯುವಕರಂತೆ ಕ್ರಿಯಾಶೀಲರಾಗಿ ದುಡಿದರು.

ಕರ್ನಾಟಕದ ಗಿರಿಜನ ಪ್ರದೇಶಗಳಲ್ಲಿ, ನಾಡಿನ ಬಹುಭಾಗಗಳಲ್ಲಿ ಉತ್ಸಾಹದಿಂದ ಪ್ರವಾಸ ಮಾಡಿದರು. ಇಮ್ಡೂ ಇಲ್ಲದಂತಿದ್ದ ಗಿರಿಜನ ಸಂಸ್ಕೃತಿಯನ್ನು ನಾಗರಿಕ ಸಂಸ್ಕೃತಿಗೆ ಪರಿಚಯಿಸಿದರು. ಇದಕ್ಕಾಗಿ ಬದುಕಿನ ಉದ್ದಕ್ಕೂ ಗಳಿಸಿದ್ದ, ಮುಖ್ಯವಾಗಿ ಚಲನಚಿತ್ರ ಕ್ಷೇತ್ರದಲ್ಲಿ ಗಳಿಸಿದ್ದ ಅನುಭವವನ್ನು ಜಾನಪದ ಕ್ಷೇತ್ರಕ್ಕೆ ಧಾರಾಳವಾಗಿ ಬಳಸಿಕೊಂಡರು.

ಕರೀಂಖಾನ್ ಅಕಾಡೆಮಿಯ ಮೂರನೇ ಅವಧಿಯ ಎರಡನೇ ಅಧ್ಯಕ್ಷರಾಗಿದ್ದರು. ಅವರ ಅವಧಿಯಲ್ಲಿ ನಡೆದ ಕಾರ್ಯ ಚಟುವಟಿಕೆಗಳ ವಿಹಂಗಮ ನೋಟ ಹೀಗಿದೆ :

ಸಹ್ಯಾದ್ರಿ ಶ್ರೇಣಿಯ ಆಜುಬಾಜಿನಲ್ಲಿ ವಾಸಿಸುತ್ತಿರುವ ಗಿರಿಜನರ ಬಳಿಗೇ ಹೋಗಿ ಅವರ ಜೀವನ ವಿಧಾನವನ್ನು ವಿಡಿಯೋ ಚಿತ್ರೀಕರಣದ ಮೂಲಕ ದಾಖಲಿಸುವ ಬೃಹತ್ ಕಾರ್ಯವನ್ನು ಕರೀಂಖಾನ್ ಯಶಸ್ವಿಯಾಗಿ ನೆರವೇರಿಸಿದರು. ಶಿವಮೊಗ್ಗ ಜಿಲ್ಲೆಯ ಗೊಂಡರು, ಕುಣಬಿಯರು; ಉತ್ತರ ಕನ್ನಡ ಜಿಲ್ಲೆಯ ಸಿದ್ದಿಯರು, ಹಾಲಕ್ಕಿ ಒಕ್ಕಲಿಗರು, ಮುಕ್ರಿಯರು; ಕೊಡಗು ಜಿಲ್ಲೆಯ ಕಂಬಟ್ಟಿಯರು, ಕುಡಿಯರು, ಯರವರು, ಫಣಿಯರು; ಮೈಸೂರು ಜಿಲ್ಲೆಯ ಸೋಲಿಗರು, ಜನಾಂಗಗಳ ಬಗೆಗೆ ವೀಡಿಯೋ ಚಿತ್ರೀಕರಣ ಮಾಡಲಾಯಿತು. ಈ ಕುರಿತು ಕರೀಂಖಾನ್ ಹೀಗೆ ಪ್ರತಿಕ್ರಿಯಿಸಿದ್ದಾರೆ:

"ನಮ್ಮ ಪುರಾತನ ಜನಪದ ಕಲೆಗಳು ಕೈಬಿಟ್ಟುಹೋಗ್ತಾ ಇವೆ. ಜನರು ಇವುಗಳಿಂದ ದೂರವಾಗ್ತಾ ಇದಾರೆ, ತಾತ್ಸಾರ ಭಾವ ತಾಳ್ತಾ ಇದಾರೆ. ಆದ್ದರಿಂದ ಈ ಪುರಾತನ ಕಲೆಗಳನ್ನು ಸಂಗ್ರಹಿಸಿ ಭದ್ರವಾಗಿ ಇಡಬೇಕು ಅನ್ನೋ ದೃಷ್ಟಿಯಿಂದ ನಾನು ಅಕಾಡೆಮಿಯ ಅಧ್ಯಕ್ಷನಾದ

ಮೇಲೆ ವಿಡಿಯೋ ಚಿತ್ರೀಕರಣ ಕೈಗೊಂಡೆ. ಸುಮಾರು ಇನ್ನೂರ ನಲವತ್ತು ಗಂಟೆಗಳ ಕಾಲ ಕೂತು ನೋಡುವಷ್ಟು ಈ ಕಲೆಗಳನ್ನು ವಿಡಿಯೋ ರೆಕಾರ್ಡಿಂಗ್ ಮಾಡಿಸ್ದೆ. ಸಹ್ಯಾದ್ರಿ ಶ್ರೇಣಿಯಲ್ಲಿ ಇರುವಂಥ ಗಿರಿಜನ ಜನಾಂಗಗಳನ್ನೆಲ್ಲಾ ಭೇಟಿಮಾಡಿ ಅವರ ಬಗೆಗೆ ಚಿತ್ರೀಕರಣ ಮಾಡಿಸಿದೆ. ಅವರ ಆಚಾರ ವಿಚಾರ, ಹಬ್ಬ ಹರಿದಿನ, ಅವರು ಬಾಳ್ತಾ ಇರೋ ರೀತಿಗಳನ್ನೆಲ್ಲಾ ಚಿತ್ರೀಕರಿಸಿದೆ". ಗಿರಿಜನ ಸಂಸ್ಕೃತಿಯ ದಾಖಲಾತಿ ಬಗೆಗೆ ಕರೀಂಖಾನ್‌ರಿಗಿದ್ದ ದೂರಾಲೋಚನೆ ಮೌಲಿಕವಾಗಿದೆ.

ಗಿರಿಜನರಿಗೆ ಸಂಬಂಧಿಸಿದ ಅಪರೂಪವಾದ, ಮನಮೋಹಕವಾದ ನೂರಾರು ವರ್ಣಪಾರದರ್ಶಿಕೆಗಳನ್ನೂ ಕಪ್ಪು ಬಿಳುಪು ಬಣ್ಣದ ಛಾಯಾ ಚಿತ್ರಗಳನ್ನೂ ತೆಗೆದು ಸಂಗ್ರಹಿಸಲು ಕ್ರಮ ಕೈಗೊಂಡರು.

ಗಿರಿಜನರ ಸಮಗ್ರ ವಿಡಿಯೋ ಚಿತ್ರದ ಆಧಾರದಿಂದ ಒಂದೂವರೆಗಂಟೆಯ ಸಾಕ್ಷ್ಯಚಿತ್ರವನ್ನು ಸಿದ್ಧಪಡಿಸಿದರು.

ಚಿಟ್ ಮೇಳ, ಕಿನ್ನರಿ ಜೋಗಿ ಮೇಳ, ಪಟಾಕುಣಿತ, ಚೌಡಿಕೆ, ವೀರಗಾಸೆ, ಲಂಬಾಣಿ ಕುಣಿತ, ಕೊಂಬಾಟ್, ಸೋಮನ ಕುಣಿತ, ಕೋಲಾಟ, ಪೂಜಾಕುಣಿತ, ಕರಪಾಲ ಮೇಳ– ಕಲೆಗಳ ಸಾಕ್ಷ್ಯ ಚಿತ್ರವನ್ನು ತಯಾರುಮಾಡಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯಡಕದ ಸಿರಿಜಾತ್ರೆ, ಗುಲ್ಬರ್ಗ ಜಿಲ್ಲೆ ಅಫಜಲ್ ಪುರ ತಾಲ್ಲೂಕು ಮಾಶ್ಯಾಳದ ಚೌಡೇಶ್ವರಿ ಜಾತ್ರೆಗಳನ್ನು ಸಂಪೂರ್ಣವಾಗಿ ಚಿತ್ರೀಕರಿಸಲು ವ್ಯವಸ್ಥೆ ಮಾಡಿದರು.

ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಅಖಿಲ ಕರ್ನಾಟಕ ಗಿರಿಜನ ಜಾನಪದ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲು ಮುಂದಾದರು. ಆ ಸಂದರ್ಭದಲ್ಲಿ ಕರೀಂಖಾನ್ ಹೀಗೆ ಪ್ರತಿಕ್ರಿಯಿಸಿದರು : "ಕಾಡುಗಳ ಒಡಲಲ್ಲಿ ಬದುಕುತ್ತಿರುವ ಬುಡಕಟ್ಟು ಜನಾಂಗಗಳದೇ ಒಂದು ಮಿನಿ ಜಗತ್ತು. ನಾವು ಬಂದ ಹಾದಿಯ ಪಳೆಯುಳಿಕೆಯಂತಿರುವ ಈ ಜನಾಂಗವನ್ನು ಕಂಪ್ಯೂಟರ್ ಯುಗಕ್ಕೆ ಧಾವಿಸುತ್ತಿರುವವರಿಗೆ ಪರಿಚಯ ಮಾಡಿಸುವುದು ನಮ್ಮ ಗುರಿ. ಇದು ಒಂದು ರೀತಿಯಲ್ಲಿ ಇಂದಿನ ಮಂದಿಗೆ ನಿನ್ನೆಯ ನೆನಪು ಮಾಡಿಕೊಡುವ ಪ್ರಯತ್ನ. ನಮ್ಮ ಮುಂದಿನ ಪೀಳಿಗೆಗೆ ಪುಟ್ಟ ಕಾಣಿಕೆ". ಜಾನಪದ ಉಳಿಸಿಕೊಳ್ಳಲು ವೈಜ್ಞಾನಿಕತೆಯನ್ನು ಬಳಸಿಕೊಂಡಿದ್ದು ವಿಶೇಷ.

ಮಂಡ್ಯ ಜಿಲ್ಲೆ ಬಂಡಿಹೊಳೆಯಲ್ಲಿ ತಾಲ್ಲೂಕು ಮಟ್ಟದ ಕಲಾಮೇಳ, ಅರಸೀಕೆರೆ ತಾಲ್ಲೂಕಿನ ಕುರುವಂಕ ಗ್ರಾಮದಲ್ಲಿ ವಿಭಾಗ ಮಟ್ಟದ ಕಲಾಮೇಳ, ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಜಾನಪದ ಸಮ್ಮೇಳನ, ಬೀದರ್‌ನಲ್ಲಿ ಜಾನಪದ ಕಮ್ಮಟ, ಅಥಣಿಯಲ್ಲಿ ರಾಜ್ಯ ಮಟ್ಟದ ಜನಪದ ಕಲಾಮೇಳಗಳನ್ನು ನಡೆಯಿಸಿ ಜಾನಪದ ಜಾಗೃತಿ ಮೂಡಿಸಿದರು.

ಅನಾರೋಗ್ಯ ಪೀಡಿತರಾದ ಜನಪದ ಕಲಾವಿದರಿಗೆ ವೈದ್ಯಕೀಯ ನೆರವು ನೀಡಲು, ಐವತ್ತೆಂಟು ವರ್ಷ ದಾಟಿದ ಕಲಾವಿದರಿಗೆ ಮಾಸಾಶನ, ಗೌರವಧನ ದೊರಕಲು ರಾಜ್ಯ ಸರಕಾರಕ್ಕೆ ಶಿಫಾರಸ್ಸು ಮಾಡಿದರು. ಅಕಾಡೆಮಿಯ ಅಧ್ಯಕ್ಷಾವಧಿಯ ಪ್ರಥಮ ವರ್ಷದಲ್ಲೇ ಅಭೂತಪೂರ್ವವಾಗಿ ಕೆಲಸ ಮಾಡಿ ಸೈ ಎನ್ನಿಸಿಕೊಂಡಿದ್ದು ಕರೀಂಖಾನ್‌ರ ಹೆಚ್ಚುಗಾರಿಕೆ.

ಅಕಾಡೆಮಿ ಅಧ್ಯಕ್ಷಾವಧಿಯ ಎರಡನೇ ವರ್ಷದಲ್ಲಿ ಆಗುಮಾಡಿದ ಕೆಲವು ಕಾರ್ಯಕ್ರಮಗಳು ಹೀಗಿವೆ : ಮೈಸೂರಿನಲ್ಲಿ ಕನ್ನಡ ಜನಪದ ಕಥೆಗಳ ರಾಜ್ಯಮಟ್ಟದ ವಿಚಾರ ಸಂಕಿರಣ, ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ರಾಜ್ಯಮಟ್ಟದ ಲಾವಣಿ ಮತ್ತು ಗೀಗೀ ಸಂಪ್ರದಾಯದ ವಿಚಾರಸಂಕಿರಣ, ಬಿಜಾಪುರ ಜಿಲ್ಲೆ ಬಸವನ ಬಾಗೇವಾಡಿಯಲ್ಲಿ ಬಿಜಾಪುರ ಜಿಲ್ಲಾ ಮಟ್ಟದ ಕಲಾಮೇಳ, ಉತ್ತರ ಕನ್ನಡ ಜಿಲ್ಲೆ ಅಂಕೋಲದಲ್ಲಿ ಜಿಲ್ಲಾಮಟ್ಟದ ಜನಪದ ಕಲಾಮೇಳ, ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಜನಪದ ಕಲಾಮೇಳ, ಕುವೆಂಪು ವಿಶ್ವವಿದ್ಯಾಲಯದಲ್ಲಿ ತೊಗಲುಗೊಂಬೆ ಕಮ್ಮಟ, ಉತ್ತರ ಕನ್ನಡ ಜಿಲ್ಲೆ ಹೊನ್ನಾವರದಲ್ಲಿ ಯಕ್ಷಗಾನ ಪ್ರಾತ್ಯಕ್ಷಿಕೆ, ರಾಮನಗರ ಜಿಲ್ಲೆ ನಾಗವಾರದಲ್ಲಿ ಗ್ರಾಮಮಟ್ಟದ ಕಲಾಮೇಳಗಳು ನಡೆದವು. ಈ ಕಾರ್ಯಕ್ರಮಗಳ ವ್ಯವಸ್ಥೆಗೆ ಕರೀಂಖಾನ್ ತಮ್ಮ ಸಿಬ್ಬಂದಿಯೊಡನೆ ಬಿಡುವಿಲ್ಲದಂತೆ ದುಡಿದರು.

ಅಧ್ಯಕ್ಷಾವಧಿಯ ಮೂರನೆಯ ವರ್ಷದಲ್ಲೂ ಗಮನಾರ್ಹವಾದ ಕಾರ್ಯಕ್ರಮಗಳು ನಡೆದವು. ಉದಾಹರಣೆಗೆ: ಮುಂಬೈನಲ್ಲಿ ಯಕ್ಷಗಾನ ಸಮ್ಮೇಳನ ಮತ್ತು ಬಣ್ಣಗಾರಿಕೆ ಕಮ್ಮಟ, ಸೊಲ್ಲಾಪುರದಲ್ಲಿ ಗಡಿನಾಡ ಜನಪದ ಕಲಾಮೇಳ, ಹಲಸಂಗಿಯಲ್ಲಿ ಜನಪದ ಕಲಾಮೇಳ, ದೊಡ್ಡ ಬಳ್ಳಾಪುರದಲ್ಲಿ ಜನಪದ ಕಲಾಮೇಳ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಮೂಹ ಮಾಧ್ಯಮಗಳು ಮತ್ತು ಜಾನಪದ ವಿಚಾರಸಂಕಿರಣ, ಮಂಗಳೂರು ವಿಶ್ವವಿದ್ಯಾಲಯದಲ್ಲಿ ಜನಪದ ಆಟಗಳು ವಿಚಾರ ಸಂಕಿರಣ, ಶಿವಮೊಗ್ಗ ಜಿಲ್ಲೆಯ ಹೇರಂಭಾಪುರದಲ್ಲಿ ಜನಪದ ಕಲಾಮೇಳ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಜಾನಪದ ವೈಜ್ಞಾನಿಕ ಅಧ್ಯಯನದ ನೆಲೆಗಳು ವಿಚಾರಸಂಕಿರಣ, ಹುಬ್ಬಳ್ಳಿಯಲ್ಲಿ ಅಖಿಲ

ಕರ್ನಾಟಕ ವಾದ್ಯ ಸಮ್ಮೇಳನ, ಮಂಡ್ಯದಲ್ಲಿ ಅಖಿಲ ಕರ್ನಾಟಕ ವೃತ್ತಿ ಗಾಯಕರ ಕಲಾಮೇಳ, ಮೊದಲಾದವು ಉಲ್ಲೇಖಕ್ಕೆ ಅರ್ಹವಾಗಿವೆ.

ಜಾನಪದ ಪ್ರೇಮಿ ಕರೀಂಖಾನರಿಗೆ ಜನಪದ ಕಲಾವಿದರ ಬಗೆಗೆ ಇನ್ನಿಲ್ಲದ ಪ್ರೀತಿ. ಕಲಾವಿದರು ಉಳಿದರೆ ಜನಪದ ಕಲೆ ಉಳಿಯುತ್ತದೆ ಎಂಬ ನಂಬಿಕೆ. ಜಾನಪದ ಅಕಾಡೆಮಿಯ ದಶಮಾನೋತ್ಸವ ಸಿದ್ಧತೆಯ ಮುನ್ನ ಕರೀಂಖಾನ್ ಜನಪದ ಕಲಾವಿದರ ಬಗೆಗೆ ಹೀಗೆ ಹೇಳಿದರು : "ಜಾನಪದ ಕಲಾವಿದರು ರಸ್ತೆಯಲ್ಲಿ ಮೆರವಣಿಗೆಯ ರಂಗನ್ನು ಹೆಚ್ಚಿಸುವ (ಮಹಾರಾಜರ ಕಾಲದಿಂದಲೂ) ಕಲಾವಿದರಾಗಿಯೇ ಉಳಿದರೇ ಹೊರತು, ರಾಜರ ಆಸ್ಥಾನದಲ್ಲಿ, ಸಭೆಗಳಲ್ಲಿ ಗೌರವ ಪಡೆಯಲಿಲ್ಲ. ಅಂತೆಯೇ ಈಗ ಈ ಕಲಾವಿದರಿಗೆ ಸೂಕ್ತ ಮನ್ನಣೆ, ಪುರಸ್ಕಾರ, ಪ್ರಶಸ್ತಿ, ಸ್ಥಾನ ಮಾನಗಳನ್ನು ನೀಡುವುದು, ಅವರ ಕಲೆಯ ಬಗ್ಗೆ ಆಳವಾದ ಅಧ್ಯಯನ, ಪ್ರಯೋಗ ಶೀಲತೆ ನಡೆಸುವುದು, ಬೇರೆ ಬೇರೆ ಪ್ರದೇಶದ ಕಲಾವಿದರೊಂದಿಗೆ ವಿಚಾರ ವಿನಿಮಯ ಮಾಡಿಸುವುದು. ಪ್ರವಾಸ ಮುಂತಾದವುಗಳ ಮೂಲಕ ಈ ಕಲಾವಿದರಲ್ಲಿರುವ ಕೀಳರಿಮೆ ಹೋಗಲಾಡಿಸುವುದು ಅಕಾಡೆಮಿಗಳಂತಹ ಸಂಸ್ಥೆಗಳ ಪ್ರಯತ್ನವಾಗಿದೆ".

ಕರೀಂಖಾನ್ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಮೂರು ವರ್ಷಗಳ ಅವಧಿಯಲ್ಲಿ ಮಾಡಿದ ಕೆಲಸ ಕಾರ್ಯಗಳು ಎಂಥವರೂ ಮೆಚ್ಚುವಂಥವು. ಮುಂದಿನವರು ಅನುಸರಿಸುವಂಥವು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಕರೀಂಖಾನರು ಜನಪದ ಗೀತ ಸಂಗ್ರಾಹಕರಾಗಿ, ಗಾಯಕರಾಗಿ, ಪ್ರಚಾರಕರಾಗಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಮಾಡಿದ ಸೇವೆ ಚಿರಕಾಲದ ಸ್ಮರಣೆಗೆ ಅರ್ಹವಾಗಿದೆ. ಅವರ ಬದುಕು ಧನ್ಯ, ಅವರ ಸಾಧನೆ ಮಾನ್ಯ.

***

ಎಸ್.ಕೆ. ಕರೀಂಖಾನ್ ಸಾಹಿತ್ಯ

(ಪ್ರಕಟಿತ ಮತ್ತು ಅಪ್ರಕಟಿತ)

ಜನಪದ ಗೀತ ಸಂಗ್ರಹಗಳು

1. ಜನಪದ ಗೀತೆ 1955
2. ಜನಪದ ಗೀತೆ ಭಾಗ-2 1959
3. ಜನಪದ ಗೀತೆ – ಅನುಭವ ದರ್ಶನ 1960
4. ಕನ್ನಡ ಜಾನಪದ ಗೀತೆಗಳು 2003
5. ಜಾನಪದ ಗೀತೆಗಳು 2007

ಕಥಾ ಸಂಗ್ರಹಗಳು

6. ನೀವಾರ (ಸಾಮಾಜಿಕ–ಅನುವಾದ) 1949
7. ನೀಹಾರ (ಚಾರಿತ್ರಿಕ–ಅನುವಾದ) 1953
8. ಲತಾದ್ರುಮ

ಕಾದಂಬರಿಗಳು

9. ಸಮೀರ (ಸಾಮಾಜಿಕ)
10. ಮುಷೀರ (ಸಾಮಾಜಿಕ)
11. ಬಲಿದಾನೀ ಹುಸೇನ್ (ಚಾರಿತ್ರಿಕ) 1955
12. ಮಾತೃಶಾಪ (ಪೌರಾಣಿಕ)

ನಾಟಕಗಳು

13. ನಿರ್ದೋಷಿ (ಸಾಮಾಜಿಕ) 1954
14. ಮಾಗಡಿ ಕೆಂಪೇಗೌಡ (ಚಾರಿತ್ರಿಕ) 1959
15. ಬೆಂಗಳೂರು ಕೆಂಪೇಗೌಡ (ಚಾರಿತ್ರಿಕ) 1984–85
16. ಶ್ರೀ ಕೃಷ್ಣಲೀಲಾ (ಪೌರಾಣಿಕ) 1987
17. ಮಧುಮೋಹನ್ (ಸಾಮಾಜಿಕ–ರಚನೆ 1957)

18. ಹಣವೋ ಗುಣವೋ
19. ಅಂಬರನಾಥ್ (ಚಾರಿತ್ರಿಕ)
20. ಹುಮಾಯೂನ್ (ಚಾರಿತ್ರಿಕ)
21. ಕಲಿಕರ್ಣ
22. ಲೈಲಾಮಜ್ನು
23. ಒಂದು ಸುಳ್ಳು
24. ಮಿಂಚು (ಸಾಮಾಜಿಕ)
25. ಮಾಲತಿ ಮಾಧವ (ಸಂಸ್ಕೃತದಿಂದ)
26. ಚಿತೋಡ್ ವಿಜಯ (ಚಾರಿತ್ರಿಕ)
27. ಗಂಗೆಗೌರಿ (ಪೌರಾಣಿಕ)
28. ಭಕ್ತಧ್ರುವ
29. ಲವಕುಶ

ಕವನ–ಭಕ್ತಿಗೀತೆ – ಚಲನಚಿತ್ರ ಗೀತೆ

30. ಕೆಂಪೇಗೌಡ ಸೌರಭ 1989
31. ಶ್ರೀ ಗೋಮಟೇಶ್ವರ
32. ಧರ್ಮಸ್ಥಳದ ಮಂಜುನಾಥ
33. ಗವಿರಂಗಾಪುರದ ರಂಗನಾಥ
34. ರಂಭಾಪುರ ಸ್ವಾಮಿಗಳ ಸ್ವಾಗತಗೀತೆ
35. ಕೂಡ್ಲಿ ಸ್ವಾಮಿಗಳು
36. ಕೊಲ್ಲೂರು ಮೂಕಾಂಬಿಕೆ
37. ಅಯ್ಯಪ್ಪಸ್ವಾಮಿ
38. ಶ್ರೀ ಮಂತ್ರಾಲಯ ರಾಘವೇಂದ್ರ ಸ್ವಾಮಿ
39. ತಿರುಪತಿ ಶ್ರೀ ವೆಂಕಟೇಶ್ವರ
40. ಅದಮಾರುಮಠ ಸ್ವಾಮಿ
    ಮತ್ತು
41. 250 ಚಲನಚಿತ್ರ ಗೀತೆಗಳು.
    [ಅಪೂರ್ಣ]

ಜಾನಪದ ಜಂಗಮ ನಾಡೋಜ ಡಾ: ಎಸ್. ಕೆ. ಕರೀಂಖಾನ್ ಕನ್ನಡ ಜನಪದಗೀತ ಸಂಗ್ರಹ, ಗಾಯನ, ಪ್ರಚಾರ, ಪ್ರಸಾರಗಳಲ್ಲಿ ವಿಶೇಷ ಕೊಡುಗೆ ನೀಡಿದ ಮಹನೀಯರು. ಜನಪದ ಗೀತಗಾಯನವನ್ನು ಸ್ವಾತಂತ್ರ್ಯ ಹೋರಾಟ ಹಾಗೂ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಆಕರ್ಷಕವಾಗಿ ಬಳಸಿದ್ದು ಗಮನಾರ್ಹವಾಗಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಅವರು ಬುಡಕಟ್ಟು ಜನಾಂಗದ ಆಡಿಯೋ ವಿಡಿಯೋ ಮಾಡಿದ್ದು, ಬುಡಕಟ್ಟು ಜನಾಂಗದ ಕಲಾವಿದರಿಗೆ ವಿಶೇಷ ಪ್ರಶಸ್ತಿ ಪ್ರಾರಂಭಿಸಿದ್ದು, ಜಾನಪದದ ಅಧ್ಯಯನ ಪರಿಧಿಯನ್ನು ಅರ್ಥಪೂರ್ಣವಾಗಿ ವಿಸ್ತರಿಸಿದ್ದು ಪ್ರತ್ಯೇಕ ಉಲ್ಲೇಖಕ್ಕೆ ಅರ್ಹವಾಗಿದೆ.

ಧಾರ್ಮಿಕ ಸೌಹಾರ್ದತೆ, ಭಾತೃತ್ವ, ದೇಶಭಕ್ತಿ, ಆದರ್ಶ ಮಾನವೀಯತೆಗೆ ಹೆಸರಾಗಿದ್ದ ಅವರು ಸೃಜನಶೀಲ ಸಾಹಿತಿಯೂ ಹೌದು. ಸೃಜನಶೀಲ ಕಥೆ, ಕಾದಂಬರಿ, ನಾಟಕ, ಭಕ್ತಿಗೀತೆ, ಚಲನಚಿತ್ರ ಗೀತೆ ಮೊದಲಾದ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿದ ಸೇವೆ ವಿಶಿಷ್ಟವಾಗಿದೆ. ಬಹುಮುಖ ಪ್ರತಿಭೆಯ ಕರೀಂಖಾನ್ ಸ್ವಾತಂತ್ರ್ಯ ಹೋರಾಟಗಾರರೂ ಭಾರತ ಸೇವಾದಳದ ಕಾರ್ಯಕರ್ತರೂ ಆಗಿದ್ದರು.

ಪ್ರಸ್ತುತ ಗ್ರಂಥದಲ್ಲಿ ಡಾ. ಕರೀಂಖಾನರ ಜಾನಪದ ಕೊಡುಗೆಯನ್ನು ಪ್ರಧಾನವಾಗಿ ಪರಿಚಯಿಸಿದೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು